ಮಾನಸಿ

ನವೆಂಬರ್ 2005 ತಿಂಗಳ ಪತ್ರಿಕೆ

ಮಾನಸ ತಿಂಗಳ ಪತ್ರಿಕೆ ನವಂಬರ್ 2005

ಸಂಪುಟ : 20 ಸಂಚಿಕೆ : 10

ವಿಳಾಸ :

"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ - ಪೋಸ್ಟ್
ಬೆಂಗಳೂರು - 560 067

ಸೂಚನೆ :

ಬಿಡಿಪ್ರತಿ	10-00 ರೂ.
ವಾರ್ಷಿಕ ಚಂದಾ	100-00 ರೂ.
ಸಂಸ್ಥೆಗಳಿಗೆ	150-00 ರೂ.

ಈ ಸಂಚಿಕೆಯಲ್ಲಿ.....

ಮೈಸೂರು

ಮೈಸೂರಿನಲ್ಲಿ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ
ವೆಂ.ವನಜ : 2329, 12ನೇ ಮೇನ್, 2ನೇ ಹಂತ ವಿಜಯನಗರ, ಮೈಸೂರು - 570 017

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ-ಅಂಚೆ, ಬೆಂಗಳೂರು - 560 067

ಸಂಪಾದಕೀಯ



ಇತ್ತೀಚೆಗೆ ಎಲ್ಲಾ ಬಡಾವಣೆಗಳಲ್ಲಿ ಹುಟ್ಟಿಕೊಳ್ಳುತ್ತಿರುವ ಸಂಸ್ಕೃತಿಯಾಗಿ ಲೈವ್‌ಬ್ಯಾಂಡ್ ಕಾಣಿಸಿಕೊಂಡಾಗ - ಪ್ರಗತಿಪರ ಆಲೋಚನೆ ಹಾಗೂ ಕಾಳಜಿಯುಳ್ಳ ಸಂಘಟನೆಗಳು ಹಾಗೂ ಹಲವಾರು ಗಣ್ಯರು - ಈ ಬಗ್ಗೆ ಚಿಂತನೆ ನಡೆಸಿದ್ದಲ್ಲದೇ, ಇದರ ವಿರುದ್ಧವಾಗಿ ಪ್ರತಿಭಟನೆ ಕೂಡಾ ನಡೆಸಿದ್ದರು. ಇದೆಲ್ಲದರ ಫಲವಾಗಿ ಅಪರಾಧಗಳ ಅಡ್ಡೆಗಳಾಗಿದ್ದ ಲೈವ್‌ಬ್ಯಾಂಡ್ ಕೇಂದ್ರಗಳು ಮುಂಬೈ, ಬೆಂಗಳೂರು ಮುಂತಾದ ಎಲ್ಲಾ ನಗರ ಕೇಂದ್ರಗಳಲ್ಲೂ ಮುಚ್ಚಲ್ಪಟ್ಟಿವೆ. ಜೊತೆಗೆ ಅಪಹರಿಸಲ್ಪಡುತ್ತಿದ್ದ ಲೈವ್‌ಬ್ಯಾಂಡ್ ನರ್ತಕಿಯರ ಸಂಖ್ಯೆಯೂ ಕಡಿಮೆಯಾಗಿದೆ ಎಂದು ವರದಿಯಾಗಿದೆ.

ಆದರೆ ಲೈವ್‌ಬ್ಯಾಂಡ್ ಮುಚ್ಚಿದ ನಂತರದಲ್ಲಿ ನರ್ತಕಿಯರ ಬಗ್ಗೆ ವರದಿಯಾದ ವಿಷಯಗಳು ನಿಜಕ್ಕೂ ಶೋಚನೀಯವಾದವು. ಮಾಧ್ಯಮಗಳಲ್ಲಿ ಮುಖ ಮುಚ್ಚಿಕೊಂಡು ಕಾಣಿಸಿಕೊಳ್ಳುವ ಲೈವ್‌ಬ್ಯಾಂಡ್ ಹುಡುಗಿಯರಿಗೆ ಅಂಟಿಕೊಂಡಿರುವ ಸಾಮಾಜಿಕ ಸ್ಟಿಗ್ಮಾ ಅವರ ಸ್ಥಾನ - ಮಾನಗಳನ್ನು ಪ್ರತಿಬಿಂಬಿಸುತ್ತವೆ. ಲೈವ್‌ಬ್ಯಾಂಡ್‌ನಿಂದಲೇ ಒಂದು ಆರ್ಥಿಕ ನೆಲೆ ಕಂಡುಕೊಂಡಿದ್ದ ಈ ಹುಡುಗಿಯರು ಇಂದು ಬೀದಿಗೆ ಬಿದ್ದಿದ್ದಾರೆ. ವೇಶ್ಯಾವಾಟಿಕೆ ಬಹಳಷ್ಟು ಹುಡುಗಿಯರಿಗೆ ಅನಿವಾರ್ಯ ಕಸುಬಾಗ ತೊಡಗಿದೆ.. ಲೈವ್ ಬ್ಯಾಂಡ್‌ನಲ್ಲಿ ದಲ್ಲಾಳಿಗಳು, ಮಧ್ಯವರ್ತಿಗಳ ಮಧ್ಯೆ ಕೂಡಾ ಇಂತಹವೇ ಕೃತ್ಯಗಳಿಗೆ ಇವರು ತೊಡಗಿಸಿಕೊಂಡಿದ್ದಿರಬಹುದು. ಆದಾಗ್ಯೂ ಬೀದಿ ಬೀದಿಯಲ್ಲಿ ತಮ್ಮನ್ನು ಮಾರಿಕೊಳ್ಳುವ ದಮನೀಯ ಸ್ಥಿತಿಗೆ ಇವರು ಇಳಿದಿದ್ದಾರೆ. ಅನೇಕ ಲೈವ್‌ಬ್ಯಾಂಡ್ ಹುಡುಗಿಯರು ಆತ್ಮಹತ್ಯೆಗೆ ಶರಣು ಹೋಗಿದ್ದಾರೆ. ಅಲ್ಲಲ್ಲಿ ಪ್ರತಿಭಟನೆ ನಡೆಸಿ ಲೈವ್ ಬ್ಯಾಂಡ್ ಹುಡುಗಿಯರು ತಮ್ಮ ವಿರೋಧ ಕೂಡಾ ವ್ಯಕ್ತಪಡಿಸಿದ್ದಾರೆ.

ಲೈವ್‌ಬ್ಯಾಂಡ್‌ನಲ್ಲಿ ನರ್ತಕಿಯರಾಗಿದ್ದ ಈ ಹುಡುಗಿಯರಿಗೆ ಅದು ಅವರ ಆಯ್ಕೆಯಲ್ಲ. ಬಡತನ, ನಿರುದ್ಯೋಗ - ಇಂತಹ ಅನೇಕ ಅಂಶಗಳು ಅವರನ್ನು ಲೈವ್‌ಬ್ಯಾಂಡ್‌ಗೆ ತಳ್ಳಿರಬಹುದು. ಅಥವಾ ದಲ್ಲಾಳಿ, ಮಧ್ಯವರ್ತಿಗಳು ಅವರನ್ನು ಲೈವ್‌ಬ್ಯಾಂಡ್‌ನಂತಹ ಅಡ್ಡೆಗಳಿಗೆ ಕರೆದೊಯ್ದಿರಬಹುದು. ಅಪರಾಧಗಳಿಗೆ ತೊಡಗಿಸಿರಬಹುದು. ಏನೇ ಆದರೂ, ಲೈವ್ ಬ್ಯಾಂಡ್‌ಗೆ ಅನಿವಾರ್ಯವಾಗಿ ತಳ್ಳಲ್ಪಟ್ಟ ಮಹಿಳೆಯರ ಸ್ಥಿತಿ - ಗತಿಗಳಿಗೆ ಸರ್ಕಾರ ನೇರವಾಗಿ ಕಾರಣವಾಗಿರುತ್ತದೆ. ಹಾಗಾಗಿ ಸರ್ಕಾರ ಈ ಹುಡುಗಿಯರಿಗೆ ಮರು ಜೀವನ ನಡೆಸಲು ಸಾಧ್ಯವಾಗುವಂತಹ ಸ್ವಯಂ ಉದ್ಯೋಗ ಅವಕಾಶ ಕಲ್ಪಿಸಿಕೊಡಬೇಕು. ಲೈವ್‌ಬ್ಯಾಂಡ್ ಹುಡುಗಿಯರು ಮುಖ ಮುಚ್ಚಿಕೊಳ್ಳುವಂತಹ ಸ್ಟಿಗ್ಮಾದಿಂದ ಈಚೆ ಬರುವಂತಹ ಆತ್ಮಸ್ಥೈರ್ಯ ಅವರಲ್ಲಿ ಮೂಡಿಸಬೇಕು. ವೇಶ್ಯಾವಾಟಿಕೆಗೆ ಅನಿವಾರ್ಯವಾಗಿ ತೊಡಗಿಕೊಳ್ಳುವಂತಹ ಇವರಿಗೆ ಸಂಘಟನೆ ಅಗತ್ಯ. ಕಾಳಜಿಯೊಳ್ಳ ಸಂಘ ಸಂಸ್ಥೆಗಳು ಇವರ ಪುನರಸ್ವತಿಗೆ ಪೂರಕವಾಗಿ ಕೆಲಸ ಮಾಡಬೇಕಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇವರು ನಮ್ಮೊಳಗೆ ಒಂದಾಗಿ ಬದುಕಲು, ಗೌರವಯುತವಾಗಿ ಜೀವನ ನಡೆಸಲು, ಮುಖ ಮುಚ್ಚಿಕೊಳ್ಳದೇ ಓಡಾಡಲು ಹಕ್ಕು ಹೊಂದಿರುವವರು ಎಂಬುದನ್ನು ಗುರುತಿಸಿ ಗೌರವಿಸುವುದು ಮುಖ್ಯ ಅಂಶವಾಗುತ್ತದೆ.

ಗಾಂಧಾರಿ

ವೆಂ.ವನಜ

ಗಾಂಧಾರಿಯ ಹೆಸರನ್ನು ನೀವು ಕೇಳಿಯೇ ಇದ್ದೀರಿ. ಅವಳೇ ನಾನು. ಸುಬಲ ನನ್ನ ತಂದೆ. ಗಾಂಧಾರದ ರಾಜನ ಮಗಳಾದ ನಾನು ಗಾಂಧಾರಿ ಎಂದೇ ಹೆಸರಾದೆ. ತಂದೆತಾಯಿಯ ಪ್ರೇಮದ ಪುತ್ರಿಯಾದ ನನಗೆ ಚಿಕ್ಕಂದಿನಿಂದಲೇ ಧರ್ಮನಿಷ್ಠೆ ಮತ್ತು ಕರ್ತವ್ಯ ನಿಷ್ಠೆಗಳ ಪ್ರಜ್ಞೆಗಳ ಪಾಠಗಳು ನಡೆದಿದ್ದು ಅವು ನಾನು ಬೆಳೆದಂತೆ ಬೆಳೆದು ಹೆಮ್ಮರವಾದವು. ಪ್ರಾಯಕ್ಕೆ ಬಂದಂತೆ ಸುಂದರಳಾಗಿದ್ದ ನನಗೆ ವರಾನ್ವೇಷಣೆಯ ಪ್ರಯತ್ನಗಳು ನಡೆಯಬೇಕೆನ್ನುವಾಗಲೇ ನನ್ನ ತಂದೆತಾಯಿಗಳಿಗೆ ಕುರುವಂಶದ ರಾಜಕುಮಾರ ಧೃತರಾಷ್ಟ್ರನ ಹೆಸರು ಕೇಳಿಬಂತು. ಪಿತಾಮಹರಾದ ಭೀಷ್ಮರು ಕುರುವಂಶದ ಯುವರಾಜನಿಗೆ ತಕ್ಕ ವಧುವಿನ ಹುಡುಕಾಟದಲ್ಲಿದ್ದರು. ಆಗವರಿಗೆ ನನ್ನ ಬಗ್ಗೆ ಯಾರೋ ತಿಳಿಸಿದ್ದರಂತೆ. ಹೀಗಾಗಿ ನನ್ನ ತಂದೆಗೆ ಹಸ್ತಿನಾಪುರದಿಂದ ಪತ್ರಗಳು ಬರತೊಡಗಿದವು. ಆದರೆ ನನ್ನ ತಂದೆ ಅವುಗಳಿಗೆ ಮಾರುತ್ತರ ನೀಡುವುದನ್ನು ಮುಂದೂಡುತ್ತಿದ್ದರು. ಈ ವಿಷಯ ನಿಧಾನವಾಗಿ ಸಖಿಯರ ಮೂಲಕ ನನಗೆ ತಲುಪಿತು. ನನಗೆ ಕುತೂಹಲವೆನಿಸಿತು. ತಂದೆಯ ಈ ಹಿಂಜರಿಕೆಗೆ ಕಾರಣವೇನೆಂದು ತಿಳಿಯುವ ಕುತೂಹಲ ಅದಾಗಿತ್ತು. 'ಅಮ್ಮನನ್ನು ಕೇಳಲೆ ?' ಎಂದುಕೊಂಡೆನಾದರೂ ಅವಳೂ ನನ್ನೊಂದಿಗೆ ಏನನ್ನಾದರೂ ಹೇಳುವ ಆತುರ ತೋರಲಿಲ್ಲವಾದ್ದರಿಂದ ಸಂಕೋಚದಿಂದ ಸುಮ್ಮನಾದೆ. ಕ್ರಮೇಣ ಈ ವಿಷಯ ನನ್ನ ಮನಃಪಟಲದಿಂದ ಮರೆಯಾಗುತ್ತಿದೆಯೆನ್ನುವಷ್ಟರಲ್ಲಿ ಹಸ್ತಿನಾಪುರದಿಂದ ಮತ್ತೆ ಮತ್ತೆ ಒತ್ತಡ ಬರುತ್ತಿರುವುದು ತಿಳಿದುಬಂತು. ಇನ್ನು ಮುಂದೆ ನನ್ನ ತಂದೆಗೆ ಯಾವುದೇ ಉತ್ತರ ನೀಡದೆ ಸುಮ್ಮನಿರುವುದು ಸಾಧ್ಯವಿರಲಿಲ್ಲ. ಕಾರಣ, ಹಸ್ತಿನಾಪುರ ಒಂದು ದೊಡ್ಡ ಸಾಮ್ರಾಜ್ಯವಾದರೆ ಗಾಂಧಾರ ಒಂದು ಸಣ್ಣ ರಾಜ್ಯವಾಗಿತ್ತು. ಕುರುವಂಶದವರ ಚಕ್ರಾಧಿಪತ್ಯಕ್ಕೆ/ಸಾಮ್ರಾಜ್ಯಕ್ಕೆ ಸಮನಾಗಲು ಗಾಂಧಾರದಂಥ ಎಷ್ಟೋ ರಾಜ್ಯಗಳು ಒಟ್ಟು ಸೇರಬೇಕಾಗಿತ್ತು. ಅಂಥ ಚಕ್ರಾಧಿಪತ್ಯದ ಒಡೆಯರಿಂದ ಬಂದ ವಿವಾಹ ಸಂಬಂಧೀ ಮಾತುಕತೆಯನ್ನು ಮುಂದುವರೆಸದಿರುವುದು ಜಾಣತನವೆನಿಸುತ್ತಿರಲಿಲ್ಲ. ಅಥವಾ ಅದನ್ನು ತಿರಸ್ಕರಿಸುವುದು ಸುಲಭದ ಮಾತಾಗಿರಲಿಲ್ಲ. ಒಂದು ವೇಳೆ ಹಾಗೆ ತಿರಸ್ಕರಿಸಿ ಮುಂದಾಗುವ ಪರಿಣಾಮಗಳನ್ನೆದುರಿಸುವ ಸಾಮರ್ಥ್ಯವೂ ಗಾಂಧಾರಕ್ಕಿರಲಿಲ್ಲ. ಅದರಿಂದಲೇ ಭೀಷ್ಮರಿಗೆ ಉತ್ತರ ಕೊಡುವುದು ನನ್ನ ತಂದೆಗೆ ಅನಿವಾರ್ಯವಾಗಿತ್ತು.

ತಂದೆ ಸುಬಲರು ಅಮ್ಮನೊಂದಿಗೆ ನನ್ನ ಅಂತಃಪುರವನ್ನು ಪ್ರವೇಶಿಸಿದಾಗ ನನಗೆ ಅಚ್ಚರಿ - ಸಂತಸಗಳು ಏಕಕಾಲದಲ್ಲುಂಟಾದವು. ಅವರು ನನ್ನೊಡನೆ ಯಾವುದೋ ಮಹತ್ವದ ವಿಷಯವನ್ನು ತಿಳಿಸಲೆಂದೇ ಬಂದಿದ್ದಾರೆಂದೂ, ಅದು ನನ್ನ ಬದುಕಿಗೆ ಸಂಬಂಧಿಸಿದ ವಿಷಯವೇ ಆಗಿರಬೇಕೆಂದೂ ಊಹಿಸಿದೆ. ಅಂತೆಯೇ ನನ್ನ ತಂದೆ ಭೀಷ್ಮರ ಪತ್ರದ ಸಾರಾಂಶವನ್ನು ತಿಳಿಸಿ ನನ್ನ ಪ್ರತಿಕ್ರಿಯೆಯನ್ನು ನಿರೀಕ್ಷಿಸುವವರಂತೆ ನನ್ನತ್ತ ತಿರುಗಿ ಸೂಕ್ಷ್ಮವಾಗಿ ಗಮನಿಸ ತೊಡಗಿದರು. ಅನಿರೀಕ್ಷಿತವಾದ ವಿಷಯವಲ್ಲದಿದ್ದರೂ ಆ ಕೂಡಲೆ ಪ್ರತಿಕ್ರಿಯಿಸುವುದು ಹೇಗೆಂದು ತಿಳಿಯದ ನಾನು ಅಮ್ಮನೇನಾದರೂ ಹೇಳಹುದೆಂದು ಅವಳತ್ತ ನೋಡಿದೆ. ಆದರೆ ಅಮ್ಮ ಏನನ್ನಾದರೂ ಹೇಳುವುದಿರಲಿ ನನ್ನ ನೋಟವನ್ನು ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿರುವಂತೆ ಕಂಡಳು. ವಿಷಯ ಸ್ವಲ್ಪ ಗಂಭೀರವಾಗಿದೆಯೆಂದೆನಿಸಿತು. ಏನೆಂದು ತಿಳಿಯದೆ ಮತ್ತಷ್ಟು ವಿವರಗಳಿಗಾಗಿ ಎನ್ನುವಂತೆ ತಂದೆಯತ್ತ ನೋಡಿದೆ. ಅವರೀಗ ಸ್ವಲ್ಪ ಸ್ವಲ್ಪವೇ ಬಾಯಿಬಿಡತೊಡಗಿದರು : 'ಮದುವೆಯಾಗಲಿರುವ ಯುವರಾಜ ಹುಟ್ಟು ಕುರುಡ. ಶಂತ ರಾಜನ ಮೊಮ್ಮಗ; ವಿಚಿತ್ರವೀರ್ಯನ ಮೊದಲ ಪತ್ನಿ ಅಂಬಿಕೆಯ ಮಗ. ನಿಯೋಗದಿಂದ ಜನಿಸಿದವನು. ಭವಿಷ್ಯದಲ್ಲಿ ಸಾಮ್ರಾಜ್ಯದ ಒಡೆಯನಾಗುವವನು. ಇವನನ್ನು ನೀನು ಮದುವೆಯಾಗೆಂದು ಯಾವ ಬಾಯಲ್ಲಿ ಹೇಳುವುದೆನ್ನುವುದೇ ನಮಗಿರುವ ಚಿಂತೆ, ಮಗಳೆ, ಸ್ವಯಂವರವೇರ್ಪಡಿಸಿ ನಿನ್ನಿಚ್ಛೆಯಂತೆ ನೀನು ವರಿಸಿದವನೊಂದಿಗೆ ಮದುವೆ ಮಾಡಬೇಕೆಂದಿದ್ದೆವು. ಆದರೀಗ ಕಾಲಮಿಂಚಿದಂತೆನಿಸುತ್ತಿದೆ. ನಾವೀಗ ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದೇವೆ. ನಿನ್ನ ಅಭಿಪ್ರಾಯವನ್ನು ತಿಳಿದ ಮೇಲೆಯೇ ನಾವೊಂದು ನಿರ್ಧಾರಕ್ಕೆ ಬರಬೇಕಿದೆ. ಅದಕ್ಕೆಂದೇ ಇಲ್ಲಿಗೆ ಬಂದೆವು, ಮಗಳೆ' ಎಂದ ತಂದೆಯ ಕಣ್ಣಾಲಿಗಳು ತುಂಬಿ ಬಂದಿದ್ದವು. ಗಂಟಲ ನರಗಳು ಉಬ್ಬಿಕೊಂಡು ಮಾತು ಸಾಕೆಂಬಂತೆ ಅವರು ತಲೆಯಾಡಿಸಿದರು. ಪಕ್ಕದಲ್ಲೇ ಇದ್ದ ಅಮ್ಮನ ದುಃಖದ ಕಟ್ಟೆಯೀಗ ಒಡೆದಿತ್ತು. ಅವಳು ನನ್ನನ್ನು ತಬ್ಬಿಕೊಂಡು ಬಿಕ್ಕಿಬಿಕ್ಕಿ ಅಳತೊಡಗಿದಳು.

ನನಗೀಗ ಪರಿಸ್ಥಿತಿ ಅರ್ಥವಾಗ ತೊಡಗಿತು. ಈ ಸಮಸ್ಯೆಯ ಕಗ್ಗಂಟನ್ನು ನನ್ನಿಂದಲ್ಲದೆ ಮತ್ತಾರಿಂದಲೂ ಬಿಡಿಸಲಾಗುತ್ತಿರಲಿಲ್ಲವೆನ್ನುವುದು ಸ್ಪಷ್ಟವಾಗಿತ್ತು. ನನ್ನ ಹೆತ್ತವರನ್ನು ಇಂಥ ಇಕ್ಕಟ್ಟಿನಿಂದ ಪಾರುಮಾಡಲು ನನಗೆ ಮಾತ್ರ

ಸಾಧ್ಯವೆಂದ ಮೇಲೆ ಅದು ನನ್ನ ಕರ್ತವ್ಯವೆಂದು ಭಾಸವಾಯಿತು. ನನಗಿರುವ ಒಂದೇ ದಾರಿಯೆಂದರೆ, ಈ ಮದುವೆಗೆ ಒಪ್ಪಿಗೆ ನೀಡುವುದು. ಒಂದು ವೇಳೆ ನನ್ನ ಕನಸಿನ ರಾಜಕುಮಾರ ಇವನಲ್ಲವೆಂದು ತಿರಸ್ಕರಿಸಿ, ಇನ್ನೊಬ್ಬನಿಗಾಗಿ ಕಾದುಕೂತರೆ ಅಪ್ಪ-ಅಮ್ಮ ನನ್ನ ತೀರ್ಮಾನವನ್ನು ಸಂತೋಷದಿಂದಲೇ ಒಪ್ಪಿಕೊಳ್ಳುತ್ತಾರಾದರೂ, ಭೀಷ್ಮ ಇದನ್ನು ತನಗಾದ ಅವಮಾನವೆಂದು ಭಾವಿಸಿದರೆ ಅಚ್ಚರಿ ಪಡಬೇಕಾಗಿಲ್ಲ. ಅಂಬೆ, ಅಂಬಿಕೆ ಮತ್ತು ಅಂಬಾಲಿಕೆಯರನ್ನು ತನ್ನ ತಮ್ಮನಿಗಾಗಿ ಅಪಹರಿಸಿದಂತೆ ಈಗ ಮೊಮ್ಮಗನಿಗಾಗಿ ನನ್ನನ್ನು ಅಪಹರಿಸುವುದಿಲ್ಲವೆಂದು ಹೇಗೆ ಹೇಳುವುದು ? ಅಂಥ ಮಹಾಶೂರನ ಮುಂದೆ ಸರಿಸಮನಾಗಿ ನಿಲ್ಲುವವರಾರು ? ನನ್ನನ್ನು ಅವನಿಂದ ರಕ್ಷಿಸುವವರಾದರೂ ಯಾರು ? ಇದು ನನ್ನ ತಂದೆತಾಯಿಗಳಿಗೆ ಮಾತ್ರವೇ ಅಲ್ಲ, ಇಡೀ ರಾಜ್ಯಕ್ಕೇ ಅವಮಾನಕರ ಸಂಗತಿಯಾಗುವುದಿಲ್ಲವೆ ? ಅಲ್ಲದೆ ಅವನ ಸಾಮ್ರಾಜ್ಯದ ವಿರುದ್ಧ ಹೋರಾಟಕ್ಕೆ ನಿಲ್ಲಲು ಗಾಂಧಾರ ದೇಶಕ್ಕೆ ಸಾಧ್ಯವೆ ? ಹಾಗಾದಾಗ ಅಪಾರ ಸಾವು ನೋವುಗಳನ್ನು ಅನುಭವಿಸಬೇಕಾಗಬಹುದಲ್ಲವೆ ? ಅಂಥ ಪರಿಸ್ಥಿತಿಗೆ ನಾನೇ ಕಾರಣಳಾಗುತ್ತೇನಲ್ಲದೆ ನನಗಾಗಲಿರುವ ಅನ್ಯಾಯವನ್ನೇನೂ ಅದರಿಂದ ತಪ್ಪಿಸಲಾಗುವುದಿಲ್ಲ. ಅದಕ್ಕೆ ಬದಲಾಗಿ ಅನ್ಯಾಯವನ್ನೇ ಬಹುಮಾನವೆಂದುಕೊಂಡು, ನೋವನ್ನು, ದುಃಖವನ್ನು ಅಂತರಂಗದಲ್ಲೇ ಹೂತುಹಾಕಿ ನಗುಮುಖದಿಂದ ಎಲ್ಲವನ್ನು ಎದುರಿಸಲು ಸಿದ್ಧಳಾಗುವುದೇ ಜಾಣತನ. ಹೀಗೆ ಯೋಚಿಸುತ್ತಲೇ ಒಂದು ನಿರ್ಧಾರಕ್ಕೆ ಬಂದ ನಾನು,' ಅಪ್ಪ, ಚಿಂತಿಸಬೇಡಿ. ನಾನೀ ಮದುವೆಗೆ ಸಿದ್ಧಳಿದ್ದೇನೆ' ಎಂದೆ. ನನ್ನ ತಂದೆ ಅಚ್ಚರಿಯಿಂದ ನನ್ನೆಡೆಗೆ ಎವೆಯಿಕ್ಕದೆ ನೋಡಿದರೆ, ಅಮ್ಮ ಕಣ್ಣೀರಿಡುವುದನ್ನು ಮರೆತು ಗರಬಡಿದವಳಂತೆ ನಿಂತಳು. 'ಹೌದಪ್ಪ, ನಾನು ಹೇಳಿದ್ದನ್ನು ನಂಬಿ. ನೀವು ಈ ಮದುವೆಗೆ ಹಿಂದೇಟು ಹಾಕುತ್ತಿರುವುದು ಧೃತರಾಷ್ಟ್ರ ಕುರುಡ ಎಂದಲ್ಲವೆ ? ಅದಕ್ಕೇಕೆ ಚಿಂತೆ ? ಅವನನ್ನು ಮದುವೆಯಾಗಿ ನಾನೇ ಕಣ್ಣಾಗುತ್ತೇನೆ. ತನ್ನ ಸುತ್ತಲ ಜಗತ್ತನ್ನು ಕಾಣುವ ಭಾಗ್ಯವಿಲ್ಲವೆನ್ನುವ ಅವನ ವಂಚಿತತೆಯ ಭಾವನೆಯನ್ನು, ನೋವನ್ನು ದೂರಮಾಡುತ್ತೇನೆ. ಈ ಪ್ರಪಂಚವನ್ನು ಅವನು ನನ್ನ ಕಣ್ಣುಗಳ ಮೂಲಕ ನೋಡುವಂತೆ ಮಾಡುತ್ತೇನೆ. ಹೀಗೆ ನನ್ನ ಬದುಕನ್ನು ಸಾರ್ಥಕಗೊಳಿಸಿಕೊಳ್ಳುತ್ತೇನೆ. ಇಲ್ಲಿ ಇನ್ನೊಂದು ವಿಷಯವನ್ನೂ ಗಮನಿಸಿ. ನಾನೊಂದು ಉತ್ತಮ ಕುಲದ ಸೊಸೆಯಾಗುತ್ತೇನೆ. ನಾನೊಬ್ಬ ದೊಡ್ಡ ಸಾಮ್ರಾಟನ ಪಟ್ಟದರಸಿಯಾಗುತ್ತೇನೆ. ಇದು ನಿಮ್ಮ ಗೌರವ ಪ್ರತಿಷ್ಠೆಗಳನ್ನೂ ಹೆಚ್ಚಿಸುತ್ತದೆಂದು ಭಾವಿಸುತ್ತೇನೆ' ಎಂದೆ. ಇಬ್ಬರ ಕಣ್ಣಲ್ಲೂ ಆನಂದಭಾಷ್ಪಗಳ ಸುರಿಮಳೆ. ಅಮ್ಮ ನನ್ನನ್ನು ತಬ್ಬಿಹಿಡಿದು ನನ್ನ ಕಣ್ಣು, ಮುಖ ಎಲ್ಲೆಂದರಲ್ಲಿ ಲೊಚಲೊಚನೆ ಮುತ್ತಿಟ್ಟಳು. ಅಂದಿನ ನನ್ನ ನಿರ್ಧಾರದಿಂದ ನನ್ನಲ್ಲಿ ಸಾರ್ಥಕ್ಯದ ಭಾವನೆ ತುಂಬಿ ಬಂದಿತ್ತು.

ನನ್ನ ಮದುವೆ ಕುರುವಂಶದ ರಾಜಕುಮಾರ ಧೃತರಾಷ್ಟ್ರನೊಂದಿಗೆ ಅದ್ದೂರಿಯಾಗಿ ನೆರವೇರಿತು. ನಾನು ನನ್ನ ಪತಿ ಕುರುಡನೆನ್ನುವುದನ್ನು ಮರೆತು ಬದುಕಲು ನಿಶ್ಚಯಿಸಿದ್ದೆ. ಅಂತೆಯೇ ನನ್ನದೇ ಮಿತಿಗಳಲ್ಲಿ ಹಗಲುಗನಸುಗಳನ್ನು ಕಾಣತೊಡಗಿದ್ದೆ. ಕುರುಡನಾದರೇನಂತೆ ?ಮನಸ್ಸೊಂದಿದೆಯಲ್ಲ! ಸುಶಿಕ್ಷಿತನಾದ ಪತಿಗೆ ನನ್ನಂತೆ ಕನಸು ಕಾಣುವುದಂತೂ ಸಾಧ್ಯವಿದೆಯಲ್ಲ. ಹೃದಯವಿದೆ ಎಂದಮೇಲೆ ಪ್ರೀತಿಗೆಲ್ಲಿಯ ಬರ ? ಅದೊಂದಿದ್ದರೆ ಸ್ವರ್ಗವೇ ಕೈಗೆಟುಕಿದಂತಲ್ಲವೆ ? ಅಂದ ಮೇಲೆ ಅಂಧತ್ವ ಎಲ್ಲಿಯ ಅಡ್ಡಿ ? ಎಂದೆಲ್ಲಾ ಚಿಂತಿಸುತ್ತಾ ನನಗೆ ನಾನೇ ಸಮಾಧಾನ ತಂದುಕೊಳ್ಳುತ್ತಿದ್ದೆ. ಆದರೆ ಧೃತರಾಷ್ಟ್ರ ನನ್ನ ಕಲ್ಪನೆಯ ಪತಿಯಾಗಲು ಸಾಧ್ಯವಿಲ್ಲವೆಂದು ತಿಳಿಯಲು ತಡವಾಗಲಿಲ್ಲ. ಪ್ರಥಮ ಸಮಾಗಮದಲ್ಲೇ ನನ್ನೊಂದಿಗೆ ಮೃಗೀಯವಾಗಿ ವರ್ತಿಸಿದ ಅವನು ನನ್ನ ಪೂರ್ವಾಪರಗಳನ್ನು ವಿಚಾರಿಸತೊಡಗಿದ 'ನೀನು ಸುಂದರಿ ಎಂದು ಕೇಳಿದ್ದೇನೆ. ನಾನು ನಿನಗೆ ತಕ್ಕವನಲ್ಲವೆಂದು ನನಗೆಗೊತ್ತು' ಎಂದು ಮಾತಿಗೆ ಪೀಠಿಕೆ ಹಾಕಿದ. 'ನಿನ್ನ ಕನಸಿನ ರಾಜಕುಮಾರ ಸಿಗಲಿಲ್ಲವೆಂದು ನಿನಗೆ ಬೇಸರವೆ ? ' ಎಂದು ಅಣಕಿಸಿದ. 'ನೀನೆಂದಾದರೂ ಯಾರನ್ನಾದರೂ ಪ್ರೀತಿಸಿದ್ದೆಯಾ ?' ಎಂದು ನನ್ನ ಗತಜೀವನದತ್ತ ಅನುಮಾನದ ನೋಟ ಹರಿಸಿದ. ನನಗೀಗ ನಿಜವಾಗಿಯೂ ಭ್ರಮನಿರಸನವಾಗತೊಡಗಿತ್ತು. ಭವಿಷ್ಯದ ಕನಸುಗಳ ಗೋಪುರ ಕುಸಿದುಬಿದ್ದಿತ್ತು. ನಿರಾಶೆಯ ಸಾಗರವೇ ನನ್ನ ಕಣ್ಣ ಮುಂದಿತ್ತು. ಒಬ್ಬ ಧೀರ, ಕ್ಷಾತ್ರತೇಜದ, ಪ್ರೇಮ ಮಯಿಯಾದ, ಮೃದು-ಮಧುರ ನಡೆನುಡಿಯ ವ್ಯಕ್ತಿಯನ್ನು ನಿರೀಕ್ಷಿಸಿದ್ದ ನನಗೆ ಅಂಧನಷ್ಟೇ ಆಗಿರದೆ ಮನದಿಂದಲೂ ಕುಬ್ಜತೆಯನ್ನು ಹೊಂದಿರುವ, ಕೀಳರಿಮೆಯಿಂದ ಬಳಲುತ್ತಿರುವ, ಅನುಮಾನಿಸುವ ವ್ಯಕ್ತಿತ್ವವುಳ್ಳ ಈ ವ್ಯಕ್ತಿಯೊಂದಿಗೆ ನನ್ನ ಬದುಕು ಹೇಗಾದರೂ ಸಾಗೀತು ? ಮುಂತಾದ ಪ್ರಶ್ನೆಗಳು ನನ್ನ ಮುಂದೆ ಭೂತಾಕಾರವಾಗಿ ನಿಂತಿದ್ದವು. ಅಂಗವಿಹೀನರಿಗೆ ವಿಶೇಷವಾದೊಂದು ಸೂಕ್ಷ್ಮಗ್ರಹಣಶಕ್ತಿ ಇರುತ್ತದೆಂದು ಹೇಳುತ್ತಾರೆ. ಆದರೆ ಈ ವ್ಯಕ್ತಿಗಿರುವ ಸೂಕ್ಷ್ಮತೆಯಾದರೂ ಎಂತಹದು ? ಕೈಹಿಡಿದ ಪತ್ನಿಯನ್ನೇ ಅನುಮಾನದಿಂದ ಕಾಣುವ ಇವನು ನನ್ನನ್ನು ತನ್ನ ಸಂಶಯದ ಸುಳಿಯಲ್ಲಿ ಸಿಲುಕಿಸಿ ವಿಲವಿಲ ಒದ್ದಾಡುವಂತೆ ಮಾಡನೆ ? ಇಲ್ಲವೆಂದು ಹೇಳುವುದಾದರೂ ಹೇಗೆ ? ಇದಕ್ಕೆ ಪರಿಹಾರ ಮಾರ್ಗವಿದೆಯೆ ? ಹ್ಞಾ, ಇದೆ. ಅದೊಂದೇ ಪರಿಹಾರ. ಅವನಂತೆ ನಾನೂ ಕುರುಡಳಾಗುವುದು. ಆಗವನಿಗೆ

ಸಮಾಧಾನವಾಗಬಹುದು. ತನ್ನ ಪತ್ನಿಯೂ ತನ್ನಂತೆ ಕುರುಡಳೆಂದಾದರೆ ಅವಳ ಬಗ್ಗೆ ಬರಬಹುದಾದ ಅನುಮಾನಗಳು ಇಲ್ಲವಾಗಬಹುದು. ತನ್ನಲ್ಲಿರುವ ಕೀಳರಿಮೆ ನನ್ನೊಂದಿಗಿನ ಸಂಬಂಧದಲ್ಲಿ ಇಲ್ಲವಾಗಬಹುದು. ಅಷ್ಟರ ಮಟ್ಟಿಗೆ ನನ್ನ ಸಮಸ್ಯೆಗಳು ಕಡಿಮೆಯಾಗಬಹುದು. ನನಗೆ ಕಣ್ಣುಗಳಿದ್ದಾದರೂ ಏನು ಪ್ರಯೋಜನ ? ರಾಜವೈಭವದ ಬದುಕು ನನಗೆ ಹೊಸದೇನಲ್ಲ. ಕುರುಡಪತಿ ಕಾಣಲಾರದ ದೃಶ್ಯವೈಭವ ನನಗಾದರೂ ಏಕೆ ಬೇಕು ? ಈ ಮದುವೆಗೆ ಒಪ್ಪಿಗೆ ನೀಡಿದ ಕ್ಷಣದಿಂದಲೇ ನನ್ನ ಬದುಕು ನನಗೇ ತಿಳಿಯದ ಹಾದಿಯಲ್ಲಿ ಸಾಗುತ್ತಿತ್ತೆನ್ನುವುದು ಮನವರಿಕೆಯಾಗಿತ್ತು. ಮನಸ್ಸಿನ ಮೇಲಿನ ಹತೋಟಿ ನನಗೀಗಾಗಲೇ ಸಿದ್ಧಿಸಿದೆಯೆಂದಮೇಲೆ ಈ ಕಣ್ಣುಗಳು ಇರುವುದು, ಇಲ್ಲದಿರುವುದೂ ಎರಡೂ ನನ್ನ ಪಾಲಿಗೆ ಒಂದೇ. ಹೀಗೊಂದು ನಿರ್ಧಾರಕ್ಕೆ ಬಂದ ನಾನು ಅದನ್ನು ಕಾರ್ಯಗತಗೊಳಿಸಲು ನಿಶ್ಚಯಿಸಿದೆ. ಆಪತ್ಕಾಲದಲ್ಲಿ ಆತ್ಮರಕ್ಷಣೆಗೆಂದಿಟ್ಟುಕೊಂಡಿದ್ದ ಚೂರಿಯನ್ನು ಸೊಂಟದಿಂದ ಸರ್ರನೆ ಹೊರತೆಗೆದೆ. ಅಷ್ಟರಲ್ಲಿ ದಾಸಿಯೊಬ್ಬಳು ಕೊಠಡಿಯ ದ್ವಾರದಲ್ಲಿ ಕಾಣಿಸಿಕೊಂಡಳು. ವಿಷಯವೇನೆಂದು ಹುಬ್ಬೇರಿಸಿ ಕೇಳಿದಾಗ, ನನ್ನ ಅತ್ತೆ ಅಂಬಿಕೆಯ ಆಗಮನದ ಸುದ್ದಿಯನ್ನು ತಂದಿರುವುದಾಗಿ ತಿಳಿಸಿದಳು. ನವವಧುವಾದ ನನ್ನ ಕುಶಲೋಪರಿಗಳನ್ನು ವಿಚಾರಿಸಲು ಬಂದಿದ್ದ ಅತ್ತೆಯನ್ನು ಕಂಡಾಗ, ಅವಳು ತೋರಿದ ಪ್ರೀತಿ - ಅಭಿಮಾನಗಳನ್ನು ಕಂಡಾಗ, ಸೊಸೆಯ ಸೌಂದರ್ಯವನ್ನು ಮೆಚ್ಚಿ ಹೆಮ್ಮೆಯಿಂದ ಬೀಗುತ್ತಿದ್ದುದನ್ನು ಕಂಡಾಗ ನನ್ನ ಆ ಕ್ಷಣದ ನಿರ್ಧಾರ ಬೇರೊಂದು ಸರಳ ಮಾರ್ಗವನ್ನನುಸರಿಸಲು ನಿರ್ಧರಿಸಿದೆ. ಇನ್ನೆಂದೂ ಏನನ್ನೂ ನೋಡದ ಅಂಧಳಂತೆ ಬದುಕಬೇಕು ; ಪ್ರಾಪಂಚಿಕ ಆಸೆ - ಆಕಾಂಕ್ಷೆಗಳಿಗೆ ಲಗಾಮು ಹಾಕಿ ಆತ್ಮನಿರತಳಾಗಬೇಕು. ಆ ಮೂಲಕ ನನ್ನ ಆತ್ಮಸಂತೋಷವನ್ನು ಕಂಡುಕೊಳ್ಳಬೇಕೆಂದು ನಿರ್ಧರಿಸಿದೆ.

ನನ್ನ ಕಣ್ಣುಗಳ ಮೇಲಿದ್ದ ಕಪ್ಪು ಪಟ್ಟಿಯನ್ನು ಕಂಡವರು ಅಚ್ಚರಿಯಿಂದ, ಮೆಚ್ಚುಗೆಯಿಂದ, ಅಭಿಮಾನದಿಂದ ಪ್ರತಿಕ್ರಿಯಿಸಿದರು. ಅದಕ್ಕೆ ನನ್ನಿಂದ ಯಾವುದೇ ವಿವರಣೆಯನ್ನು ಅವರು ಕೇಳಲಿಲ್ಲ ಅಥವಾ ನಾನಾಗಿಯೇ ಕೊಡಲೂ ಇಲ್ಲ. ಎಲ್ಲರೂ ಅವರವರ ಭಾವಕ್ಕೆ ತಕ್ಕಂತೆ ಇದನ್ನು ವ್ಯಾಖ್ಯಾನಿಸಿದರು, ವಿಮರ್ಶಿಸಿದರು. ಹಾಡಿಹೊಗಳಿದರು. 'ಆಹಾ ! ಎಂಥಾ ಸಾಧ್ವಿ ಎಂಥಾ ಪತಿಭಕ್ತಿ ! ಎಂಥಾ ತ್ಯಾಗ, ಎಂಥಾ ನಿಷ್ಠೆ' ಎಂದೆಲ್ಲಾ ಕೊಂಡಾಡಿದರು. ಇವೆಲ್ಲದಕ್ಕೂ ನನ್ನ ಮೌನವೇ ಉತ್ತರವಾಗಿತ್ತು. ಧೃತರಾಷ್ಟ್ರನೂ ಎಲ್ಲರಂತೆಯೇ ಅಂದುಕೊಂಡನೋ ಏನೋ. ನನ್ನನ್ನೇನೂ ಕೇಳಲಿಲ್ಲ. ಹೀಗೇಕೆ ಮಾಡಿದೆನೆಂದು ಬಯ್ಯಲೂ ಇಲ್ಲ. ಆದರೆ ಅವನ ಮುಖದ ಮೇಲೀಗ ಸಂತೃಪ್ತಿ - ಸಮಾಧಾನಗಳ ಛಾಯೆ ನೆಲೆಗೊಂಡಿತ್ತೆಂದು ನನಗನಿಸಿತು. ಏಕೆಂದರೆ ಅವನು ಮತ್ತೆಂದೂ ನನ್ನನ್ನು ಅನುಮಾನಿಸುವ ಪ್ರಯತ್ನ ಮಾಡಿದ ನೆನಪಿಲ್ಲ. ನಾನು ಮಾತ್ರ ಪತಿಭಕ್ತಿ, ನಿಷ್ಠೆಗಳಿಂದಾಚೆ ನಿರ್ಲಿಪ್ತತೆ, ಸಮಚಿತ್ತತೆಯತ್ತ ನಿಧಾನವಾಗಿ ಕ್ರಮಿಸತೊಡಗಿದ್ದೆ. ವಿಷಯ ತಿಳಿದು ದುಃಖಿಸಿದವರೆಂದರೆ, ನನ್ನ ತಂದೆತಾಯಿಗಳು ಮತ್ತು ಅಣ್ಣನಾದ ಶಕುನಿ. ಕುರುಡನಿಗೆ ಕಣ್ಣಾಗುತ್ತೇನೆಂದವಳು ತಾನೇ ಕುರುಡಿಯಂತೆ ಬದುಕಲು ನಿಶ್ಚಯಿಸಿದಳಲ್ಲಾ ಎನ್ನುವುದೇ ಅವರ ದುಃಖಕ್ಕೆ ಕಾರಣವಾಗಿತ್ತು.

ಮದುವೆಯಾಗಿ ವರ್ಷ ತುಂಬುವಷ್ಟರಲ್ಲಿ ಗಂಡು ಮಗುವೊಂದಕ್ಕೆ ಜನ್ಮ ನೀಡಿದೆ. ಅವನೇ ಕುರುವಂಶಕ್ಕೆ ಕಂಟಕಪ್ರಾಯನಾದ ದುರ್ಯೋಧನ. ಇಡೀ ಅರಮನೆಗೆ ಅರಮನೆಯೇ ವಂಶೋದ್ಧಾರಕ ಹುಟ್ಟಿದನೆಂದು ಸಂಭ್ರಮಿಸುತ್ತಿದ್ದರೆ ನನ್ನಲ್ಲಿ ಆ ಸಂತಸ - ಸಂಭ್ರಮಗಳು ಮೈದುಂಬಲಿಲ್ಲ. ಆ ಮಗುವೇ ಮುಂದೆ ವಂಶಕ್ಕೆ ಮುಳುವಾಗುತ್ತಾನೆಂದು , ಅವನೊಂದು ವಿಷಬೀಜವೆಂದು ತಿಳಿದಿರಲಿಲ್ಲ. ತಿಳಿದಿದ್ದರೆ ಅದೊಂದು ದೊಡ್ಡ ಹೆಮ್ಮರವಾಗಿ ಬೆಳೆಯಲು ಬಿಡುತ್ತಿರಲಿಲ್ಲ. ತಾಯ್ತನದ ಹಂಬಲ ಒಮ್ಮೊಮ್ಮೆ ನನ್ನನ್ನ ಕಾಡದಿರುತ್ತಿರಲಿಲ್ಲ. ಕಣ್ಣಿಗೆ ಕಟ್ಟಿದ ಬಟ್ಟೆಯನ್ನು ಯಾರೂ ಇಲ್ಲದಾಗ ಕಿತ್ತೆಸೆದು ನನ್ನ ಕರುಳಿನ ಕುಡಿಯನ್ನು ಕಣ್ತುಂಬ ನೋಡಲೆ ಎಂದೊಮ್ಮೆ ಅನಿಸಿದರೆ, ಕೂಡಲೆ ಯಾವುದೇ ಕಾರಣಕ್ಕೂ ಒಮ್ಮೆ ತೆಗೆದುಕೊಂಡ ನಿರ್ಧಾರ ಬದಲಾಗಕೂಡದೆಂಬ ಎಚ್ಚರಿಕೆ ಮನದ ಇನ್ನೊಂದು ಮೂಲೆಯಲ್ಲಿತ್ತು. ಮಗು ಬೆಳೆದಂತೆ ಅವನೊಂದಿಗೆ ಆಡಲು ಮತ್ತಷ್ಟು ಮಕ್ಕಳು ದಿನೇ ದಿನೇ ಅಂತಃಪುರದಲ್ಲಿ ಸೇರ್ಪಡೆಯಾಗುತ್ತಿದ್ದರು. ಅವರೆಲ್ಲಾ ಅಂತಃಪುರದ ದಾಸಿಯರ ಮಕ್ಕಳಾಗಿರುತ್ತಿದ್ದರು. ಅವರ ತಂದೆ ಮಾತ್ರ ಒಬ್ಬನೇ. ಅವನೇ ಧೃತರಾಷ್ಟ್ರ! ಅವನ ಲಂಪಟತನಕ್ಕೆ ಆ ಮಕ್ಕಳು ಸಾಕ್ಷಿಯಾಗಿದ್ದವು. ಇದನ್ನು ನಂಬುವುದು ನಿಮಗೆ ಕಷ್ಟವಾಗುತ್ತಿದೆಯೆ ? ಆದರೆ ನೀವಿದನ್ನು ನಂಬಲೇಬೇಕು. ಕೌರವರೆಲ್ಲಾ ನನ್ನ ಮಕ್ಕಳೆಂದು ನಂಬಲು ನಿಮಗೆ ಸಾಧ್ಯವಾಗಿದ್ದರೆ, ಇದನ್ನು ಕೂಡ ನಂಬಲು ಸಾಧ್ಯವಾಗಬೇಕು. ಒಬ್ಬ ಹೆಣ್ಣಿಗೆ ಅದೆಷ್ಟೇ ಅವಳಿ - ತ್ರಿವಳಿಗಳು ಹುಟ್ಟಿದರೂ ಅಬ್ಬಬ್ಬಾ ಎಂದರೆ ಒಂದಿಪ್ಪತ್ತು ಮಕ್ಕಳಾಗಬಹುದೇ ಹೊರತು ನೂರೊಂದಾಗಲು ಸಾಧ್ಯವೇ ಇಲ್ಲ. ಆದರೆ ಮಹಾಭಾರತದ ಕಥಾಲೇಖಕರು ಇದನ್ನು ಸಾಧ್ಯವಾಗಿಸಿದರು. ಅವರು ಹೀಗೆ ಮಾಡಲು ಕಾರಣವಿತ್ತು. ಕುರುವಂಶದ ದೊರೆಯ ಗೌರವವನ್ನು ಕಾಪಾಡಬೇಕಿತ್ತು. ಅವರೆಲ್ಲಾ ಧೃತರಾಷ್ಟ್ರನ ಮಕ್ಕಳು,

ದಾಸಿಯರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಂದಲ್ಲಿ ಧೃತರಾಷ್ಟ್ರನ ಕಾಮುಕ ವ್ಯಕ್ತಿತ್ವದ ದರ್ಶನವಾಗುತ್ತಿತ್ತು. ವಂಶದ ಗೌರವ - ಘನತೆಗಳು ಮಣ್ಣುಪಾಲಾಗುತ್ತಿತ್ತು. ಇದನ್ನು ತಡೆಯಲು ಆ ಎಲ್ಲಾ ಮಕ್ಕಳು ತಾಯಪಟ್ಟವನ್ನು ನನಗೇ ಕಟ್ಟಿದರು. ಯಾರಿಗೂ ಅನುಮಾನ ಬರದಿರಲೆಂದು ದಂತಕಥೆಯೊಂದು ಪೂರಕವಾಗಿ ಕೆಲಸಮಾಡಿತು. 'ಗಾಂಧಾರಿ ಹೊಟ್ಟೆಕಿಚ್ಚಿನವಳು. ಕುಂತಿಯ ಸೌಭಾಗ್ಯವನ್ನು ಕಂಡು ಕರುಬುತ್ತಿದ್ದಳು. ತಾನು ಪಟ್ಟದರಸಿಯಾಗಲಿಲ್ಲವೆಂಬ ಹೊಟ್ಟೆಯುರಿಯಿಂದ ಒಮ್ಮೆ ತಾನು ಗರ್ಭಿಣಿಯೆನ್ನುವುದನ್ನು ಮರೆತು ಹೊಟ್ಟೆಯನ್ನು ಕಿವಿಚಿಕೊಂಡಾಗ ಗರ್ಭದ ಭ್ರೂಣ ಒಂದಕ್ಕೆ ನೂರಾಯಿತು. ಎನ್ನುವುದೇ ಆ ಕಥೆಯಾಗಿತ್ತು. ಹೀಗೆ ಧೃತರಾಷ್ಟ್ರನ ಗೌರವದ ರಕ್ಷಣೆಗಾಗಿ ನನ್ನನ್ನು ಹೊಟ್ಟೆಕಿಚ್ಚಿನ ಹೆಣ್ಣಾನ್ನಾಗಿ ಚಿತ್ರಿಸಲಾಯಿತು. ಒಂದು ಗಂಡಿನ ಮಾನ ಉಳಿಯುವುದು ಅಥವಾ ಅಳಿಯುವುದು ಹೆಣ್ಣಿಂದಲೇ ಅಲ್ಲವೆ ?!

ಅರಮನೆಯಲ್ಲಿ ಮಕ್ಕಳೆಲ್ಲರೂ ಅಣ್ಣತಮ್ಮಂದಿರಂತೆ ಒಟ್ಟಾಗಿಯೇ ಬೆಳೆದರು. ಮಗನ ಲಾಲನೆ-ಪಾಲನೆ ಯಲ್ಲಿ ಸಂತಸ ಪಡಬೇಕಾದ ನಾನು ಎಲ್ಲದರಿಂದಲೂ ವಿಮುಖಳಾಗುತ್ತಾ ಬಂದೆ. ಧೃತರಾಷ್ಟ್ರನಿಗೆ ನನ್ನ ಅಗತ್ಯವಿದ್ದಂತೆ ಕಾಣುತ್ತಿರಲಿಲ್ಲ. ನನ್ನ ಮಾತುಗಳನ್ನು ಕೇಳುವ ತಾಳ್ಮೆ - ಸಂಯಮಗಳೂ ಅವನಲ್ಲಿರಲಿಲ್ಲ. ಅವನ ಮನಸ್ಸು ಸಂಪೂರ್ಣವಾಗಿ ದುರ್ಯೋಧನನಲ್ಲಿ ಕೇಂದ್ರೀಕೃತ ಗೊಂಡಿದ್ದಂತಿತ್ತು. ಅವನ ಮೇಲಿನ ಅತೀವ ಪ್ರೀತಿ-ಮಮತೆಗಳು ಅವನಲ್ಲಿ ಮಡುಗಟ್ಟಿದ್ದವು. ಅದೊಂದು ಕುರುಡು ಪ್ರೇಮವೇ ಆಗಿತ್ತೆನ್ನಬಹುದು. ತನಗೆ ದೃಷ್ಟಿಯಿದ್ದಲ್ಲಿ ತಾನೇನೆಲ್ಲಾ ಮಾಡಬಹುದೆಂದುಕೊಳ್ಳುತ್ತಿದ್ದನೋ? ಅದೆಷ್ಟೇ ವಿಕೃತವಾದುದಾಗಿದ್ದರೂ ಅದನ್ನು ತನ್ನ ಮಗ ಮಾಡಲು ಪ್ರೇರಣೆ-ಬೆಂಬಲಗಳನ್ನು ನೀಡುತ್ತಿದ್ದ. ಹಿಂಸೆ-ಕ್ರೌರ್ಯಗಳು ಅವನಲ್ಲಿ ಮನೆಮಾಡಿದ್ದವು. ಅವುಗಳನ್ನೇ ತನ್ನ ಮಗನಲ್ಲಿ ಪ್ರಚೋದಿಸುತ್ತಿದ್ದ. ಅಪ್ಪನ ಮಾರ್ಗದರ್ಶನದಲ್ಲೇ ನಡೆದ ದುರ್ಯೋಧನ ಬೆಳೆದಂತೆ ನನ್ನಿಂದ ದೂರವಾಗುತ್ತಾ ಬಂದ. ನನ್ನ ಬುದ್ಧಿಮಾತುಗಳಿಗೆ ಕಿವಿಗೊಡುವ ಮನಃಸ್ಥಿತಿ ಅವನಲ್ಲಿರಲಿಲ್ಲ. ಅದಕ್ಕೆಲ್ಲಾ ಸಮಯವೂ ಅವನಲ್ಲಿರಲಿಲ್ಲ. ಪಾಂಡವರನ್ನು ಬಾಲ್ಯದಿಂದಲೇ ದ್ವೇಷಿಸಲು ಕಲಿತ. ಅದಕ್ಕೆ ಅಪ್ಪನ ಕುಮ್ಮಕ್ಕು ಸದಾ ಇದ್ದೇ ಇತ್ತು. ಬೆಳೆದಂತೆ ಅಪ್ಪನ ದುರಾಸೆ, ಲಂಪಟತನಗಳೂ ಅವನ ಮೈಗೂಡಿದವು. ಇವನ್ನೆಲ್ಲಾ ಧೃತರಾಷ್ಟ್ರ ಕಂಡೂ ಕಾಣದಂತಿದ್ದ (ಹೇಗೂ ಕಣ್ಣಿರಲಿಲ್ಲವಲ್ಲ !) ಇವರಿಬ್ಬರ ಪಾಪಕೃತ್ಯಗಳಿಗೂ ಕುರುಡಾಗಿರುವುದು ನನಗೆ ಅನಿವಾರ್ಯವಾಯಿತು. ಬದುಕಿನಲ್ಲಿ ಭರವಸೆಯ ತುಣುಕೂ ಇಲ್ಲವಾಯಿತು. ಇವರ ದುಷ್ಕೃತ್ಯಗಳ ಬೇಗೆಯಲ್ಲಿ ಬೆಂದವರು ಪಾಂಡವರಷ್ಟೇ ಅಲ್ಲ, ನಾನೂ ಅದರಲ್ಲಿ ಸ್ವಲ್ಪ ಸ್ವಲ್ಪವೇ ಬೆಂದು ಭಸ್ಮವಾಗುತ್ತಿದ್ದೆ. ದುರ್ಯೋಧನನೊಂದಿಗೆ ದುಶ್ಯಾಸನರಂಥ ದಾಸಿಯ ಮಕ್ಕಳೆಲ್ಲರ ಪಾಪಕೃತ್ಯಗಳಿಗೂ ಪರೋಕ್ಷವಾಗಿ ನಾನೇ ಹೊಣೆಗಾರಳಾಗಬೇಕಾಯಿತು. 'ಗಾಂಧಾರಿಯ ಮಕ್ಕಳು ದುಷ್ಟರು. ತಾಯಿಯಾದ ಗಾಂಧಾರಿ ಮಕ್ಕಳನ್ನು ಋಜುಮಾರ್ಗದಲ್ಲಿ ನಡೆಸಲಿಲ್ಲ, ಬೆಳೆಸಲಿಲ್ಲ ; ಉತ್ತಮ ಸಂಸ್ಕಾರ ನೀಡಲಿಲ್ಲ . ತಾಯಿಯ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಿಲ್ಲ' ಎಂದು ಜನ ಆಡಿಕೊಂಡರು. ಇವೆಲ್ಲಕ್ಕೂ ಮೂಕಪ್ರೇಕ್ಷಕಳಾಗಿರುವುದೊಂದೇ ನನಗಿದ್ದ ದಾರಿಯಾಗಿತ್ತು. ಅದಕ್ಕೂ ಕೊನೆಯೆನ್ನುವುದು ಸನ್ನಿಹಿತವಾಯಿತು. ದ್ರೌಪದಿಯ ವಸ್ತ್ರಾಪಹರಣದಂಥ ದುಷ್ಕೃತ್ಯಕ್ಕೆ ದುರ್ಯೋಧನ ಕೈಹಾಕಿದಾಗಲೇ ಅವನ ಪಾಪದ ಕೊಡ ತುಂಬಿ ಬಂದಿತ್ತೆಂದು ನನಗೆ ಮನವರಿಕೆಯಾಯಿತು. ಇದನ್ನು ಮೌನವಾಗಿ ಸಹಿಸುತ್ತಾ ನನ್ನೊಳಗೇ ಪರಿತಪಿಸಿದೆ. ನನ್ನ ಹಣೆಬರಹವನ್ನು ಶಪಿಸಿದೆ. ಇಂಥ ಬದುಕಿಗೆಂದು ಕೊನೆ ? ಅದು ಬೇಗ ಬರಲೆಂದು ದೇವರನ್ನು ಪ್ರಾರ್ಥಿಸಿದೆ. ಪಾಂಡವರ ವನವಾಸ - ಅಜ್ಞಾತವಾಸಗಳು ನನ್ನ ಪಾಲಿಗೂ ಒಂದು ರೀತಿಯ ವನವಾಸವೇ ಆಗಿತ್ತು. ನಾನೀಗ ಮೊದಲಿನಂತೆ ದುರ್ಯೋಧನನನ್ನು ಭೇಟಿಯಾಗುತ್ತಿರಲಿಲ್ಲ. ಅದಕ್ಕಾಗಿ ಅಂತಃಪುರದ ಬಾಗಿಲಿಗೆ ಬಂದವನನ್ನು ಹಾಗೇ ಹಿಂದಿರುಗುವಂತೆ ಮಾಡುತ್ತಿದ್ದೆ. ನನಗೀಗ ಬೇಕಾಗಿದ್ದುದು ಸಂಪೂರ್ಣ ಏಕಾಂತತೆ. ಹನ್ನೆರಡು ವರ್ಷಗಳು ಹೀಗೇ ಕಳೆದಿದ್ದವು. ವನವಾಸ - ಅಜ್ಞಾತವಾಸಗಳನ್ನು ಕಳೆದು ಬಂದ ಪಾಂಡವರಿಗೆ ಅವರ ಹಕ್ಕಿನ ರಾಜ್ಯವನ್ನು ಕೊಡಲು ದುರ್ಯೋಧನ ನಿರಾಕರಿಸಿದಾಗಲೇ ಅವನ ಅಂತ್ಯ ಸಮೀಪಿಸುತ್ತಿರುವುದು ನನಗೆ ಖಚಿತವಾಯಿತು. ಕುರುಕ್ಷೇತ್ರದ ಧರ್ಮಯುದ್ಧ ಆರಂಭವಾದಾಗ ಒಂದಿಷ್ಟೂ ವಿಚಲಿತಳಾಗಲಿಲ್ಲ. ಅದು ನಿಲ್ಲಬೇಕೆಂದೂ ಅನ್ನಿಸಲಿಲ್ಲ. ಅದು ಆಗಲೇಬೇಕಿದ್ದ ಯುದ್ಧವಾಗಿತ್ತು. ಅದರ ಪರಿಣಾಮ - ಫಲಿತಾಂಶಗಳೂ ನಿಚ್ಚಳವಾಗಿತ್ತು. ಪ್ರತಿದಿನ ಬೆಳಗಾಗುತ್ತಲೇ ಅಂದಿನ ಅಶುಭ ವಾರ್ತೆಗೆ ಸಿದ್ಧಳಾಗುತ್ತಿದ್ದೆ. ಇಂದು ಸತ್ತವರ ಪಟ್ಟಿಯಲ್ಲಿರುವವರು ಯಾರ್‍ಯಾರು ? ಬದುಕುಳಿದ ಮಕ್ಕಳೆಷ್ಟು ?ಮುಂತಾದ ವಿವರಗಳನ್ನು ನನಗೆ ನೀಡುತ್ತಿದ್ದವಳು ನನ್ನ ತವರಿನಿಂದ ನನ್ನೊಡನೆಯೇ ಬಂದಿದ್ದ ನನ್ನ ಆಪ್ತಸಖಿ ಇಂಥ ಸುದ್ದಿಗಳನ್ನು ತಂದಾಗಲೆಲ್ಲಾ ನನಗೆ ಅತೀವ ದುಃಖವಾಗಿದೆಯೆಂದು ಭಾವಿಸಿ ಸಾಂತ್ವನದ ನುಡಿಗಳನ್ನಾಡುತ್ತಿದ್ದಳು. ಆದರೆ ನಾನು ಶಾಂತಿಯ ಸಾಕಾರವಾಗಿದ್ದೆ. ಯಾರದೋ ಗೆಲುವಿನಿಂದ ಸಂತಸಪಡುವ, ಮತ್ತಾರದೋ ಮರಣದಿಂದ ದುಃಖಿಸುವ ಸ್ಥಿತಿಯನ್ನು ನನ್ನ

ಮನಸ್ಸು ಮೀರಿ ನಿಂತಿತ್ತು. ನಾನೀಗ ಯಾವುದೇ ಭಯಾಪೇಕ್ಷೆಗಳಿಗೊಳಗಾಗದ ಸ್ಥಿತಿಯಲ್ಲಿದ್ದೆ.

ಧೃತರಾಷ್ಟ್ರನಿಗೆ ಮಾತ್ರ ಯಾವುದೋ ಭರವಸೆ - ನಿರೀಕ್ಷೆಗಳಿದ್ದಂತಿದ್ದವು. ಮಗನ ಮೇಲಿನ ಅತಿಯಾದ ವ್ಯಾಮೋಹ ಅವನಿಗೆ ಹುಸಿಭರವಸೆ, ನಂಬಿಕೆಗಳನ್ನು ನೀಡಿತ್ತೆಂದು ಕಾಣ್ಣುತ್ತದೆ. ಅತಿರಥ-ಮಹಾರಥರ ಸಾವಿನ ಸುದ್ದಿಗಳು ಕೊನೆಕೊನೆಗೆ ಅವನನ್ನು ಕಂಗೆಡಿಸತೊಡಗಿದವಾದರೂ ತಾನು ನಿಸ್ಸಹಾಯಕನಾಗಿದ್ದ. ನೂರು ಮಕ್ಕಳಲ್ಲಿ ಒಬ್ಬರ ನಂತರ ಮತ್ತೊಬ್ಬರು ಸತ್ತು ಧುರ್ಯೋಧನನೊಬ್ಬನೇ ಸರದಿಯಲ್ಲುಳಿದಾಗ ಅವನಲ್ಲಿ ಯಾವುದೇ ಭರವಸೆ ಉಳಿದಿರಲಿಲ್ಲ. ಈ ಪರಿಸ್ಥಿತಿಯಲ್ಲೂ ನನಗೆ ಧುರ್ಯೋಧನನನ್ನು ಆಶೀರ್ವದಿಸಬೇಕೆಂದೆನಿಸಲಿಲ್ಲ. ನನ್ನ ಪಾಲಿಗೆ ಎಂದೋ ಸತ್ತು ಹೋದವನನ್ನು ಚಿರಾಯುವಾಗೆಂದು, ಅಧರ್ಮದ ಪಕ್ಷದಲ್ಲಿ ನಿಂತು ಧರ್ಮದ ವಿರುದ್ಧ ಹೋರಾಡಲು ಹೊರಟವನನ್ನು ಜಯಶೀಲನಾಗೆಂದು ಯಾವ ಬಾಯಿಂದ ಹರಸಲಿಕ್ಕಾಗುತ್ತಿತ್ತು? ಕೊನೆಗೂ ಅವನ ಸಾವಿನ ಸುದ್ದಿ ತಲುಪಿತ್ತು. ಧರ್ಮದ ವಿರುದ್ಧದ ಹೋರಾಟದಲ್ಲಿ ಅಧರ್ಮ ಅಂತ್ಯಗೊಂಡಿತ್ತು. ಇಲ್ಲಿಗೆ ಕುರುವಂಶದ ಚರಿತ್ರೆಯ ಒಂದು ದೊಡ್ಡ ಅಧ್ಯಾಯ ಕೊನೆಗೊಂಡು ಹೊಸದೊಂದು ಅಧ್ಯಾಯಕ್ಕೆ ಪೀಠಿಕೆ ಹಾಕಿತ್ತು.

ಯುದ್ಧ ಮುಗಿದು ಸಾಮ್ರಾಜ್ಯ ಪಾಂಡವರ ಪಾಲಾಗಿತ್ತಾದರೂ ಯುದ್ಧದಲ್ಲಿ ಗೆದ್ದ ಸಂತಸ - ಸಂಭ್ರಮ ಯಾರಲ್ಲೂ ಇರಲಿಲ್ಲ. ಕುರುವಂಶದ ನೂರು ಮಕ್ಕಳನ್ನು ಕಳೆದುಕೊಂಡಿದ್ದ ವೃದ್ಧದಂಪತಿಗಳಾದ ನಾವೊಂದೆಡೆಯಾದರೆ, ಭವಿಷ್ಯದಲ್ಲಿ ಸಾಮ್ರಾಜ್ಯನ್ನಾಳಬೇಕಾದ ವೀರಪುತ್ರರನ್ನು ಕಳೆದುಕೊಂಡ ಪುತ್ರಶೋಕದಿಂದ ತಪ್ತರಾಗಿದ್ದ ಪಾಂಡವರಿನ್ನೊಂದೆಡೆ. ಶೋಕ ಸಾಗರದಲ್ಲಿ ಮುಳುಗಿದ್ದ ಅರಮನೆಯನ್ನು ತ್ಯಜಿಸಿ ವಾನಪ್ರಸ್ಥಾಶ್ರಮಕ್ಕೆ ತೆರಳುವುದೇ ಲೇಸೆಂದು ವಿದುರ, ಕುಂತಿ ಮತ್ತು ಧೃತರಾಷ್ಟ್ರರು ಮುಂದಾದರು. ನನ್ನ ನಿರ್ಧಾರವೇನೆಂದು ಕೇಳಿ-ತಿಳಿಯುವ ಗೋಜಿಗೆ ಯಾರೂ ಹೋಗಲಿಲ್ಲ. ಅದರ ಅಗತ್ಯವೂ ಕಾಣಲಿಲ್ಲ. ಏಕೆಂದರೆ ನನ್ನದು ಧೃತರಾಷ್ಟ್ರನಿಗಿಂತ ಭಿನ್ನವಾದ ನಿರ್ಧಾರವಿರಲು ಸಾಧ್ಯವಿತ್ತೆಂದು ಅವರ್‍ಯಾರಿಗೂ ಅನ್ನಿಸಿರಲಿಲ್ಲ. ವಾನಪ್ರಸ್ಥಕ್ಕೆ ಹೊರಡಲು ಸಿದ್ಧತೆಗಳಾಗುತ್ತಿದ್ದಂತೆಯೇ ಎಲ್ಲರೊಂದಿಗೆ ನಾನೂ ಹೊರಡಲು ಸಿದ್ಧಳಾದೆ; ಮಾತಿಲ್ಲದೆ ಅವರನ್ನು ಹಿಂಬಾಲಿಸಿದೆ. ಎಲ್ಲರ ಕಣ್ಣಲ್ಲಿ ಪತಿವ್ರತಾ ಧರ್ಮವನ್ನು ಪಾಲಿಸುವ ಸತಿ ಸಾಧ್ವಿಯಾಗಿ ಕಂಡೆ.

ಅರಣ್ಯವಾಸದಲ್ಲಿ ದಿನಗಳೆದಂತೆ ಧೃತರಾಷ್ಟ್ರನಿಗೆ ತನ್ನ ಗತಜೀವನದ ಒಂದೊಂದೇ ತಪ್ಪುಗಳ ಅರಿವಾಗ ತೊಡಗಿದ್ದಿರಬೇಕು. ಒಂದು ದಿನ ಇದ್ದಕ್ಕಿದ್ದಂತೆ ನನ್ನ ಕಣ್ಣಿನ ಪಟ್ಟಿಯನ್ನು ತೆಗೆಯಲು ಸೂಚಿಸಿದ. ಇದನ್ನು ಕೇಳಲು ನನಗೆ ವೃದ್ಧಾಪ್ಯವೇ ಬರಬೇಕಿತ್ತೇನೋ! ಕಣ್ಣಿನ ಪಟ್ಟಿಯನ್ನು ತೆಗೆಯುವುದರಿಂದ ನನಗೆ ಪ್ರಯೋಜನವಿತ್ತೋ ಇಲ್ಲವೋ. ಅವನಿಗಂತೂ ಹಾಗೆ ಹೇಳಲು ಕಾರಣವಿತ್ತು. ಅರಮನೆಯಲ್ಲಿದ್ದಂತೆ ನಮ್ಮ ಅಗತ್ಯಗಳನ್ನು ಪೂರೈಸಲು ಇಲ್ಲಿ ದಾಸಿಯರಿರಲಿಲ್ಲ. ನಮ್ಮ ರಕ್ಷಣೆಗೆ ಅಂಗರಕ್ಷಕರೂ ಇರಲಿಲ್ಲ. ನಮ್ಮ ಅಗತ್ಯಗಳನ್ನು ನಾವೇ ಪೂರೈಸಿಕೊಳ್ಳಬೇಕಿತ್ತು, ನಮ್ಮ ರಕ್ಷಣೆಯನ್ನು ನಾವೇ ಮಾಡಿಕೊಳ್ಳಬೇಕಿತ್ತು. ಈ ಮಾತು ಇಲ್ಲಿದ್ದ ಎಲ್ಲರಿಗೂ ಅನ್ವಯಿಸುತ್ತಿತ್ತು. ಈ ಪರಿಸ್ಥಿತಿಯಲ್ಲಿ ಧೃತರಾಷ್ಟ್ರನಿಗೆ ನನ್ನ ಕೃತಕ ಅಂಧತ್ವದ ಬದುಕು ನೆನಪಾಗಿರಬೇಕು.

ಅಂಧನಾಗಿ ತಾನನುಭವಿಸುತ್ತಿರುವ ತೊಂದರೆಗಳೆಲ್ಲವನ್ನು ನಾನೂ ಅನುಭವಿಸುತ್ತಿರುವ ಅರಿವಾಗಿರಬೇಕು. ಯೋಚಿಸಲು ಮತ್ತೇನೂ ಉಳಿದಿಲ್ಲದಾಗ ಬದುಕಿನಲ್ಲಿ ತಾನೇನನ್ನು ಕಳೆದುಕೊಂಡಿದ್ದನೋ ಅವೆಲ್ಲಕ್ಕಿಂತ ಹೆಚ್ಚಿನವು ನಾನವನ ಹೆಂಡತಿಯಾಗಿ, ಧುರ್ಯೋಧನನ ತಾಯಿಯಾಗಿ ನನ್ನ ಪಾಲಿಗೆ ಇಲ್ಲವಾದುದು ಅವನ ಊಹೆಗೆ ನಿಲುಕಿರಬೇಕು. ನಾನು ಮನಸ್ಸು ಮಾಡಿದ್ದರೆ ಬದುಕಿನಲ್ಲಿ ಕೆಲವನ್ನಾದರೂ ಪಡೆಯಬಹುದಿತ್ತು. ನಾ ಹೆತ್ತಮಗುವನ್ನು ಕಣ್ತುಂಬ ನೋಡಿ ಎತ್ತಿ ಮುದ್ದಾಡಿ ಆನಂದಿಸಬಹುದಿತ್ತು. ರಾಣಿಯಾಗಿ ನನ್ನ ಹಕ್ಕುಗಳನ್ನು ಸ್ಥಾಪಿಸಬಹುದಿತ್ತು. ಧೃತರಾಷ್ಟ್ರನ ಕಣ್ಣಾಗಿ ರಾಜ್ಯಭಾರದ ನೊಗವನ್ನು ಹೊರಬಹುದಿತ್ತು. ಹಾಗೇನಾದರೂ ಆಗಿದ್ದಲ್ಲಿ ಇಂದಿನ ಪರಿಸ್ಥಿತಿಯೇ ಬದಲಾಗುತ್ತಿತ್ತು. ಆದರೆ ಹಾಗಾಗಿರಲಿಲ್ಲ. ಜೀವನ ರಥ ಹುಚ್ಚಾಪಟ್ಟೆ ಯಾರ ಲಂಗುಲಗಾಮಿಲ್ಲದೆ ಸಾಗಲು ಬಿಟ್ಟಂತಾಗಿತ್ತು. ಧುರ್ಯೋಧನನಂಥ ಹಠಮಾರಿ, ಅನನುಭವಿ ದುರಾಸೆಯ ಪ್ರತಿರೂಪ, ಅಪಕ್ವ, ಸಂಯಮಹೀನನ ಕೈಯಲ್ಲಿ ರಾಜ್ಯಭಾರದ ನೊಗವನ್ನು ಕೊಟ್ಟು ಅವನು ಕುರುವಂಶಕ್ಕೆ ಮುಳುವಾದಾಗಲೂ ನಿರ್ವಿಣ್ಣಳಾಗಿದ್ದೆ. ಇವೆಲ್ಲದರ ಅರಿವು ಧೃತರಾಷ್ಟ್ರನಿಗಿತ್ತೋ ಇಲ್ಲವೋ? ಈಗಂತೂ ಅವನ ಯೋಚನೆಯ ದಿಕ್ಕು ನನ್ನತ್ತ ತಿರುಗಿತ್ತು. ಈಗಲೂ ನಾನು ನಿಸ್ಸಯಾಹಕಳಾಗಿ ಬದುಕುವುದು ಅವನಿಗೆ ಅಸಹನೀಯವೆನಿಸಿರಬೇಕು ಅಥವಾ ನೋವುಂಟು ಮಾಡಿರಬೇಕು ; ಇದೆಲ್ಲಾ ತನ್ನಿಂದಲೇ ಎನ್ನುವ ಪಾಪ ಪ್ರಜ್ಞೆ ಕಾಡಿರಬೇಕು. ನನ್ನ ಕಣ್ಣಿನ ಮೇಲಿನ ಪಟ್ಟಿ ತೆಗೆಯುವ ಮೂಲಕ ನನ್ನ ದೀರ್ಘಕಾಲಿಕ ಅಂಧತ್ವಕ್ಕೆ ಇತಿಶ್ರೀ ಹಾಡಿದಲ್ಲಿ ಅದರಿಂದ ನಾನಷ್ಟೇ ಸ್ವಾವಲಂಬಿಯಾಗುವುದಲ್ಲ ಅವನಿಗೂ ಸ್ವಲ್ಪಮಟ್ಟಿನ ಆಸರೆಯಾಗಲು ಸಾಧ್ಯವಿತ್ತು. ಇವೆಲ್ಲದರ ಲೆಕ್ಕಾಚಾರಗಳು ಅವನಲ್ಲಿತ್ತೋ ಇಲ್ಲವೋ, ಅವನ ಮಾತುಗಳನ್ನು ಕೇಳಿದ ನನಗೆ ಈ ಎಲ್ಲಾ ಆಲೋಚನೆಗಳು ಸರಸರನೆ

ಮನಃಪಟಲದ ಮೇಲೆ ಹಾದು ಹೋದುವುದಂತೂ ನಿಜ. ಬದುಕಿನಲ್ಲಿ ಎಲ್ಲವನ್ನೂ ಕಳೆದುಕೊಂಡು ಸಾವಿನತ್ತ ಮುಖಮಾಡಿ ನಿಂತವಳಿಗೆ ಈಗ ಪಡೆಯುವಂಥದು ಏನೂ ಉಳಿದಿರಲಿಲ್ಲ. ಅದೇನಿದ್ದರೂ ಸಾವೇ ಹೊರತು ಮತ್ತೇನಾಗಿರಲಿಲ್ಲ. ಆದರೆ ಇದನ್ನೆಲ್ಲಾ ಹೇಳುವ ಆತುರವಾಗಲೀ, ಮನಸ್ಸಾಗಲೀ ನನ್ನಲ್ಲಿರಲಿಲ್ಲ. ಅವನ ಆಜ್ಞಾನುವರ್ತಿಯೆಂಬಂತೆ, ಪತ್ನೀಧರ್ಮದ ಪಾಲನೆ ಏಕೈಕ ಉದ್ದೇಶವೆಂಬಂತೆ ನನ್ನ ಬದುಕಿನ ಬಾಗಿಲಿಗೇ ಹಾಕಿದ ಪರದೆಯಂತಿದ್ದ ಕಣ್ಣಪಟ್ಟಿಯನ್ನು ತೆಗೆದೆಸೆದೆ. ಹಲವು ವರ್ಷಗಳಿಂದ ಬಾಹ್ಯ ಪ್ರಪಂಚಕ್ಕೆ ಹೊರತಾದವಳಿಗೆ ಇದು ಸಂತಸದ ಗಳಿಗೆಯಾಗಬೇಕಿತ್ತಾದರೂ ನನಗೆ ಹಾಗೆನಿಸಲಿಲ್ಲ. ಮೊಟ್ಟಮೊದಲಿಗೆ ತೆರೆದ ಕಣ್ಣುಗಳಿಗೆ ಗೋಚರಿಸಿದ್ದು ದೂರದ ಕಾಡಿನಲ್ಲಿ ಧಗಧಗಿಸುತ್ತಾ ಸಕಲ ಜೀವ-ಜಂತುಗಳನ್ನು ತನ್ನ ಕೆನ್ನಾಲಗೆಯನ್ನು ಚಾಚಿ ನುಂಗಿಹಾಕುತ್ತಾ ರಭಸದಿಂದ ನಮ್ಮತ್ತ ಧಾಪುಗಾಲಿಡುತ್ತಾ ಬರುತ್ತಿದ್ದ ಕಾಳ್ಗಿಚ್ಚು. ಅದನ್ನು ಕಾಣುತ್ತಿದ್ದಂತೆ ನನ್ನ ಮನದಲ್ಲಿ ನಿರ್ಧಾರವೊಂದು ಗಟ್ಟಿಯಾಗತೊಡಗಿತ್ತು. ಕೂಡಲೆ ನಾನು ಮಾಡಿದ ಮೊದಲ ಕೆಲಸವೆಂದರೆ ಹಲವು ವರ್ಷಗಳ ಹಿಂದೆ ಅಗ್ನಿಸಾಕ್ಷಿಯಾಗಿ ಹಿಡಿದಿದ್ದ ಧೃತರಾಷ್ಟ್ರನ ಕೈಗಳನ್ನು ಮತ್ತೊಮ್ಮೆ ಹಿಡಿದಿದ್ದೆ. ದೃಷ್ಟಿ ಮಾತ್ರ ದೂರದಲ್ಲಿ ಕಾಣುತ್ತಿದ್ದ ಕಾಳ್ಗಿಚ್ಚಿನತ್ತ ನೆಟ್ಟಿತ್ತು ; ಹೆಜ್ಜೆಗಳು ಹಿಂದಿರುಗದೆ ಮತ್ತೆಂದು ಬರದ ದಾರಿಗೆ ಸಾಗಿದ್ದವು.

ಹೆಚ್ ಎ. ಸಾವಿತ್ರಮ್ಮನವರ "ರಾಮ, ಸೀತೆ, ರಾವಣ" ಮತ್ತು "ವಿಮುಕ್ತಿ" ಮೊದಲ ಓದು

ಹಿಂದೆ ನಾನು, ನನ್ನ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಮತ್ತು ಪಠ್ಯಪುಸ್ತಕಗಳಿಂದ ತಿಳಿದುಕೊಂಡಿದ್ದ ರಾಮಾಯಣಕ್ಕೂ ಈ ಪುಸ್ತಕಕ್ಕೂ ಸಾಕಷ್ಟು ವ್ಯತ್ಯಾಸವಿದೆ.

ಅಂದರೆ ಈ ಪುಸ್ತಕವನ್ನು ಓದುವ ಮೊದಲು ನನಗೆ ರಾಮ ಆದರ್ಶ ವ್ಯಕ್ತಿಯಾಗಿದ್ದ. ತಾಯಿಯರಲ್ಲಿ ಕೌಸಲ್ಯೆ ಆದರ್ಶಳಾಗಿದ್ದಳು. ಆದರೆ ಈ ಪುಸ್ತಕ ಓದಿದ ಮೇಲೆ ನನ್ನ ಮೊದಲಿನ ತಿಳುವಳಿಕೆಯನ್ನು ಪುನರ್ ಪರಿಶೀಲಿಸುವಂತಾಗಿದೆ. ನಾನು ರಾಮನ ಮೇಲೆ ಮೊದಲು ಇಟ್ಟಿದ್ದಂತಹ ಅಭಿಮಾನ, ಪ್ರೀತಿ, ಭಕ್ತಿ, ಆರಾಧನೆ ಮುಂತಾದವುಗಳು ಈಗ ಕಡಿಮೆಯಾಗಿದ್ದು ಈ ಭಾವನೆಗಳ ಮೇಲೆ ಕಪ್ಪುಚುಕ್ಕೆಯೊಂದು ಕಾಣಸಿಕೊಂಡಂತೆ ಭಾಸವಾಗುತ್ತಿದೆ. ಎಷ್ಟು ಸಲ ಈಗ ನಾನು ನನ್ನ ಮನಸ್ಸಿನಲ್ಲಿ ರಾಮ ಒಬ್ಬ ಆದರ್ಶವ್ಯಕ್ತಿ ಎಂದು ನೆನೆದರೂ ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ಅದು ಅಸತ್ಯ. ಅಸಂಗತ ಎಂಬ ಭ್ರಮೆಯೇ ಉಂಟಾಗುತ್ತಿದೆ.

ನನಗೆ ರಾಮ ಎಲ್ಲಾ ವಿಷಯದಲ್ಲೂ ಆದರ್ಶ ವ್ಯಕ್ತಿಯಾಗಿ ಕಂಡರೂ ಸಹ ಸೀತೆಯ ವಿಚಾರದಲ್ಲಿ ಆತ ನನಗೆ ಆದರ್ಶನಾಗಲಾರ. ಕಾರಣವೇನೆಂದರೆ - ರಾಮ ಸೀತೆಗೆ ಮಾಡಿದ ಅವಮಾನ, ಅವಳನ್ನು ನಡೆಸಿಕೊಂಡ ರೀತಿ, ಅವಳ ಬಗ್ಗೆ ಬೆಳೆಸಿಕೊಂಡ ಕೀಳರಿಮೆ, ಅವಳನ್ನು ಸಂಶಯ ಪಟ್ಟಂತಹ ರೀತಿ ಇವುಗಳಿಂದ ಆತ ನನಗೆ ಒಬ್ಬ ಸಾಮಾನ್ಯ ಮನುಷ್ಯನಷ್ಟು ಸಹ ತಿಳುವಳಿಕೆ, ಯೋಗ್ಯತೆ ಇಲ್ಲದವನಂತೆ ಕಾಣುತ್ತಾನೆ. ರಾಮ ಹೇಗೆ ಏಕ ಪತ್ನೀವ್ರತಸ್ಥನಾಗಿದ್ದನೋ ಅದೇ ರೀತಿ ಸೀತೆಯೂ ಸಹ ಏಕಪತಿವ್ರತಸ್ಥೆಯಾಗಿದ್ದಳು. ರಾಮನಲ್ಲಿ ಹೇಗೆ ಪಾವಿತ್ರ್ಯತೆ ಇತ್ತೋ ಹಾಗೆ ಸೀತೆಯಲ್ಲೂ ಪಾವಿತ್ರ್ಯತೆ ಇತ್ತು. ರಾಮ ತಾನು ಏಕಪತ್ನೀವ್ರತಸ್ಥ ಎಂಬುದನ್ನು ಗಟ್ಟಿಮಾಡಿಕೊಂಡಿದ್ದ. ಆದರೆ ಸೀತೆಯೂ ಸಹ ತನ್ನಂತೆಯೇ ಏಕಪತಿವ್ರತಸ್ಥೆ ಎಂಬುದನ್ನು ಗಟ್ಟಿಮಾಡಿಕೊಳ್ಳಲಿಲ್ಲ. ಅವಳನ್ನು ರಾವಣ ಅಪಹರಿಸಿದ್ದನೆಂಬ ಕಾರಣವನ್ನೇ ಮುಂದಿಟ್ಟುಕೊಂಡು ಅನುಮಾನಿಸತೊಡಗಿದ. ರಾಮ ತನ್ನ ಪಾವಿತ್ರ್ಯದ ಮೇಲೆ ಹೇಗೆ ನಂಬಿಕೆ ಹೊಂದಿದ್ದನೋ ಹಾಗೆ ಸೀತೆಯ ಪಾವಿತ್ರ್ಯತೆಯ ಮೇಲೂ ನಂಬಿಕೆ ಇರಿಸಬೇಕಾಗಿತ್ತು.

ಏಕೆಂದರೆ ಸೀತೆಯ ಗುಣ - ಸ್ವಭಾವ ಮತ್ತು ನಡವಳಿಕೆಯ ಪರಿಚಯ ಆತನಿಗೇನು ಹೊಸದಾಗಿರಲಿಲ್ಲ. ಅವಳ ಜೊತೆಯಲ್ಲಿ ಅರಣ್ಯದಲ್ಲೂ, ಅರಮನೆಯಲ್ಲೂ ಕಳೆದಿದ್ದ, ಜೊತೆಗೆ ಹನ್ನೆರಡು ಹದಿಮೂರು ವರ್ಷಗಳ ಕಾಲ ಸಂಸಾರ ನಡೆಸಿದ್ದ. ಅವಳ ಮನಸ್ಸಿನ ಆಸೆ, ಆಕಾಂಕ್ಷೆ, ಬೇಕು - ಬೇಡಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡವನಾಗಿದ್ದ. ಅಷ್ಟು ಧೀರ್ಘ ಸಂಸಾರದ ಅನುಭವವನ್ನು, ಒಡನಾಟವನ್ನು ಹೊಂದಿದ್ದರೂ ಅವಳನ್ನು ಶಂಕಿಸಿದ್ದು ತಪ್ಪು. ಅವನು ಸೀತೆಯನ್ನು ಜನರಿಗಾಗಿ, ಅವರ ನಂಬಿಕೆಗಾಗಿ ತ್ಯಜಿಸಿದ ಎಂಬುದು ಜನರ ಒಂದು ಮಾತು ; ಈ ಮಾತು ನನ್ನ ಪ್ರಕಾರ ಹೇಳುವುದಾದರೆ ಸಮಂಜಸವಾದುದಲ್ಲ ಏಕೆಂದರೆ ಜನರೆಲ್ಲಾ ರಾಮನನ್ನು ದೇವರ ಅವತಾರವೆಂದು, ದಕ್ಷ

ರಾಜನೆಂದು ಪೂಜಿಸಿ ಅವನ ಮೇಲೆ ನಂಬಿಕೆ ಇಟ್ಟಿದ್ದರು. ರಾಮ ಸೀತೆಯನ್ನು ಪವಿತ್ರವಾದವಳೆಂದು ಸ್ವೀಕರಿಸಿ ಬಿಟ್ಟಿದ್ದರೆ ಪ್ರಜೆಗಳು ಸೀತೆಯನ್ನು ನಂಬಿಯೇ ನಂಬುತ್ತಿದ್ದರು. ಕೊನೆಗೆ ಸೀತೆ ಅಗ್ನಿಯನ್ನು ಪ್ರವೇಶಿಸಿ ಜಯಿಸಿಬಂದಿದ್ದಾಳೆಂಬ ಕಾರಣದಿಂದಾದರೂ ನಂಬುತ್ತಿದ್ದರು. ಆದರೆ ರಾಮ ಅವಳನ್ನು ಅರಣ್ಯಕ್ಕೆ ಕಳುಹಿಸಿ ಅವಳನ್ನು ಜನರು ಇನ್ನೂ ಹೆಚ್ಚು ಸಂಶಯ ಪಡುವಂತೆ ಮಾಡಿದ.

ಸೀತೆಯು ರಾಮನ ಮೇಲೆ ಇಟ್ಟಿದ್ದಂತಹ ಅಪಾರ ಪ್ರೇಮ, ಪ್ರೀತಿ ಮುಂತಾದವುಗಳಿಗೆ ರಾಮ ಕೊಟ್ಟ ಬಹುದೊಡ್ಡ ಕಾಣಿಕೆ ಇದು. ಎಲ್ಲದಕ್ಕಿಂತಲೂ ಹೆಚ್ಚಾಗಿ ಮಕ್ಕಳು ತನ್ನವೆಂದು ಸೀತೆ ಪ್ರಮಾಣ ಮಾಡಲಿ ಎಂದು ರಾಮ ಹೇಳಿದ ಮಾತು ನನಗೆ ಅವನಲ್ಲಿ ಅಸಹ್ಯ, ದ್ವೇಷ ಉಂಟಾಗಲು ಆಸ್ಪದ ಮಾಡಿಕೊಟ್ಟಿದೆ.

ಒಬ್ಬ ವ್ಯಕ್ತಿಯನ್ನು ಕೆಟ್ಟ ಗುಣಗಳಿಂದಲೇ ಗುರುತಿಸಲು ಸಾಧ್ಯವಿಲ್ಲ, ರಾಮ ಒಬ್ಬ ಸಮರ್ಥ ರಾಜ, ದಯಾಪರ, ಪ್ರಜಾಸೇವಾಪರಿಪಾಲಕ. ಈ ಎಲ್ಲಾ ವಿಷಯದಲ್ಲೂ ಆತ ಆದರ್ಶನೆಂದು ಒಪ್ಪಿದರೂ ಕೂಡ ನಾನು ಸೀತೆಯ ವಿಚಾರದಲ್ಲಿ ರಾಮ ನಡೆದುಕೊಂಡ ರೀತಿಯನ್ನು ಎಂದೆಂದಿಗೂ ಸಹ ಸಹಿಸಲಾರೆ. ಅವನ ಬಗ್ಗೆ ತಾಳ್ಮೆಯನ್ನು, ನಂಬಿಕೆಯನ್ನು ತಾಳಲಾರೆ.

ರಾಮ ಸೀತೆಗೆ ಕೊಟ್ಟಂತಹ ಈ ಘೋರ ಶಿಕ್ಷೆಯನ್ನು ನಾನು ಎಂದಿಗೂ ಕ್ಷಮಿಸಲಾರೆ.

ಮೊದಲು ನನಗೆ ತಾಯಿಯಾಗಿ ಆದರ್ಶ ಸ್ಥಾನದಲ್ಲಿ ಇದ್ದವರೆಂದರೆ ಕೌಸಲ್ಯೆ. ಆದರೆ ಈ ಪುಸ್ತಕ ಓದಿ ನನ್ನ ನಿರ್ಧಾರವನ್ನು ಬದಲಿಸಬೇಕಾಗಿದೆ. ಈಗ ಆ ಮಾತೃ ಸ್ಥಾನವನ್ನು ಸುಮಿತ್ರೆಯು ತುಂಬಿದ್ದಾಳೆ. ಕಾಸಲ್ಯೆ ಸ್ವಲ್ಪ ಸ್ವಾರ್ಥಿಯೆಂದೇ ಹೇಳಬಹುದು. ಈಕೆ ಯಾವಾಗಲೂ ಸಹ ತನಗೆ ಸಿಗದಿರುವುದಕ್ಕೆ ಆಸೆ ಪಡುತ್ತಾ ಕೊರಗುತ್ತಿರುವವಳು. ಹಾಗೆ ಎಷ್ಟೇ ಜನ ಹೆಂಡತಿಯರಿದ್ದರೂ ಕೂಡ ಪತಿ ಹೆಚ್ಚು ಸಮಯ ತನ್ನ ಜೊತೆಯೇ ಇರಬೇಕೆಂಬ ಸ್ವಾರ್ಥ. ಇದು ಸಹಜವಾದರೂ ಪತಿಯಾದವನು ಅರ್ಥಮಾಡಿಕೊಳ್ಳದಿದ್ದರೆ ಅದಕ್ಕಾಗಿ ಕೊರಗುವುದು ಒಂದು ಭ್ರಮೆ. ಪಾಲಿಗೆ ಬಂದನ್ನು ಸ್ವೀಕರಿಸಬೇಕು. ಆದರೆ ಈ ಗುಣ ಕೌಸಲ್ಯೆಯಲ್ಲಿಲ್ಲ. ಈಕೆಯಲ್ಲಿ ಹೃದಯ ವೈಶಾಲ್ಯತೆ ಕಡಿಮೆ, ಎಲ್ಲಾ ಮಕ್ಕಳಲ್ಲೂ ಈಕೆ ರಾಮ ನನ್ನು ಕಾಣಲಿಲ್ಲ, ಎಲ್ಲರನ್ನೂ ತನ್ನ ಮಕ್ಕಳೆಂದೇ ತಿಳಿಯಲಿಲ್ಲ, ತನ್ನ ಮಕ್ಕಳಂತೆ ನೋಡಿಕೊಳ್ಳುವ ಮಾತೃ ಹೃದಯವೂ ಇವಳದಾಗಿರಲಿಲ್ಲ. ಮಕ್ಕಳಿಗೆ ಊಟ - ತಿಂಡಿಯ ವಿಷಯದಲ್ಲಿ ಬಿಟ್ಟರೆ ಮತ್ತಾವ ವಿಷಯದಲ್ಲೂ ವಿಶಾಲತೆಯನ್ನು ತೋರಿಸಲಿಲ್ಲ.

ಆದರೆ, ಸುಮಿತ್ರ ಈಕೆಯ ಗುಣಕ್ಕೆ ತದ್ವಿರುದ್ಧ. ಸುಮಿತ್ರೆ ನಿಜಕ್ಕೂ ಒಬ್ಬ ಆದರ್ಶ ತಾಯಿ, ಕರುಣಾಮಯಿ, ನಿಸ್ವಾರ್ಥಿ. ಎಷ್ಟು ಹೊಗಳಿದರೂ ಸಹ ಆ ಹೊಗಳಿಕೆ ತೃಣಕ್ಕೆ ಸಮಾನ ಎಲ್ಲಾ ಮಕ್ಕಳನ್ನೂ ತನ್ನ ಮಕ್ಕಳೆಂದು ಪ್ರೀತಿಸುವ ವಿಶಾಲ ಮಾತೃ ಹೃದಯ, ಮಕ್ಕಳ ಜೊತೆಯಲ್ಲಿ ಮಕ್ಕಳಾಗುವ ಮನಸ್ಸು, ಹಾಗೆಯೇ ನಿಸ್ವಾರ್ಥಿ ರಾಜ ತನ್ನ ಜೊತೆ ಇರದಿದ್ದರೂ ಬೇರೆ ಹೆಂಡತಿಯ ಜೊತೆ ಸುಖವಾಗಿರಲೆಂದು ಹರಸುವ ಗುಣ. ಪಾಲಿಗೆ ಬಂದದನ್ನು ಸ್ವೀಕರಿಸುವ ವಿವೇಕ ಸುಮಿತ್ರೆಯದು. ಕೌಸಲ್ಯೆ ದಶರಥ ಮತ್ತೊಂದು ಮದುವೆಯಾದನೆಂದು ಕೋಪಗೊಂಡರೆ ತಮ್ಮ ವಂಶದ ಕುಡಿ ಅವಳಲ್ಲಾದರು ಅರಳಲಿ ಎಂಬ ಬಯಕೆ ಸುಮಿತ್ರೆಯದು.

ದಶರಥನು ಅತ್ಯಂತ ಪರಾಕ್ರಮಿ, ಸಾಹಸಿ ಹಾಗೂ ಚತುರ ಆಡಳಿತ ತಜ್ಞ. ಈತ ಮೂರು ಜನರನ್ನು ವಿವಾಹವಾದದ್ದು ತಪ್ಪೆಂದು ಹೇಳಲಾಗುವುದಿಲ್ಲ ಏಕೆಂದರೆ ಅತನಿಗೆ ಸಂತಾನ ಅಭಿಲಾಷೆ ಆ ರೀತಿ ಮಾಡಿದೆ. ಆದರೆ ಈತ ಮಾಡಿದ ತಪ್ಪು ಹಿರಿಯ ಹೆಂಡತಿಯ ಇಚ್ಛೆ ಪಡೆಯದೆ ಎರಡನೇ ಮದುವೆಯಾದದ್ದು, ಮೊದಲ ಮತ್ತು ಎರಡನೇ ಹೆಂಡತಿಯರನ್ನು ಕೇಳದೆ ಮೂರನೇ ಮದುವೆಯಾದದ್ದು ಮತ್ತು ಮೂರನೆಯ ಹೆಂಡತಿ ಕೈಕೆಯ ಜೊತೆಯೇ ಹೆಚ್ಚು ಕಾಲ ಇರುತ್ತಿದ್ದುದು. ಇದು ಸಮಾಧಾನಕರವಲ್ಲದ ಅಂಶ. ಈತ ವರ ನೀಡಿದ್ದು ತಪ್ಪಲ್ಲ. ಏಕೆಂದರೆ ಕೈಕೆ ಮುಂದೆ ಈ ರೀತಿಯ ವರ ಕೇಳ ಬಹುದೆಂದು ಆತ ಅಂದುಕೊಂಡಿರಲಿಲ್ಲ.

ಸೀತೆ ರಾಮಾಯಣದ ಅತಿ ಮುಖ್ಯವಾದ ಪಾತ್ರ. ಗಂಡನಿಂದ ನಿಂದಿಸಲ್ಪಟ್ಟ, ಲೋಕಾಪವಾದಕ್ಕೆ ಸಿಲುಕಿದರೂ ಬದುಕನ್ನು ಧೈರ್ಯವಾಗಿ ಎದುರಿಸಿದ ಕೆಚ್ಚೆದೆ ಇವಳದು. ಈ ಪುಸ್ತಕದಲ್ಲಿ ಆಕೆಯ ಪಾತ್ರವು ತುಂಬಾ ಮೆಚ್ಚುವಂತಹದು. ಸೀತೆ ಭೂಮಿ ತೂಕದ ಹೆಣ್ಣು. ರಾಮನನ್ನೇ ತನ್ನ ದೇವರು, ಉಸಿರು, ಆತ್ಮದ ಅವಿಭಾಜ್ಯ ಅಂಗವೆಂದು ಪೂಜಿಸುತ್ತಿದ್ದವಳು. ಆದರೆ ರಾಮ ಇವಳನ್ನು ಅರ್ಥಮಾಡಿಕೊಳ್ಳಲಿಲ್ಲ. ರಾವಣ ಸೀತೆಯನ್ನು ಅಪಹರಿಸಿಕೊಂಡು ಹೋಗಿ ಅವಳನ್ನು ಎಷ್ಟು ಬೇಡಿದರೂ ಅವನಿಗೆ ಅವಳ ಹೃದಯದಲ್ಲಿ ಸ್ಥಾನ ನೀಡಲಿಲ್ಲ. ಅದೇಕೆ ಅವನನ್ನು ತಲೆ ಎತ್ತಿಯೂ ಸಹ ನೋಡಲಿಲ್ಲ, ಅವನ ಪ್ರೀತಿಯ ಮಾತಿಗೆ ಮರುಳಾಗಲಿಲ್ಲ. ಅವನ ಯಾವ ಆಮಿಷಕ್ಕೂ ಒಳಗಾಗಲಿಲ್ಲ. ಇದರಿಂದಲೇ ಸೀತೆಯ ಗುಣ ಬಹಳ ದೊಡ್ಡದು. ಅವಳು ತುಂಬಾ ಗಟ್ಟಿ ಮನಸ್ಸುಳ್ಳವಳೆಂದು ಈ ಪುಸ್ತಕ ಸ್ಪಷ್ಟಪಡಿಸುತ್ತದೆ. ಲಂಕೆಯಲ್ಲಿದ್ದ ಪ್ರತಿ ಗಳಿಗೆಯೂ ರಾಮನ ಧ್ಯಾನದಲ್ಲಿದ್ದ ಸಾಧ್ವಿ, ರಾಮನಲ್ಲಿ ಅಪಾರ ಪ್ರೀತಿ, ನಂಬಿಕೆ ಇಟ್ಟಿದ್ದವಳು. ಆದರೆ ಇದಕ್ಕೆ ಪ್ರತಿಯಾಗಿ ರಾಮ ಕೊಟ್ಟ ಪೆಟ್ಟು ವಾಸಿಯಾಗದ್ದು. ಸೀತೆ ರಾಮ

ಅವಳನ್ನು ಅರಣ್ಯಕ್ಕೆ ಕಳುಹಿಸಿ ಅನಾಥಳನ್ನಾಗಿ ಮಾಡಿದರೂ ಎಂತಹ ಕಷ್ಟದ ಸಂದರ್ಭದಲ್ಲೂ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ ಇದು ಮೆಚ್ಚುವಂತಹುದು. ಒಬ್ಬ ರಾಜಕುಮಾರಿಯ ರೀತಿಯಲ್ಲಿ ಬೆಳೆದ ಸೀತೆ ಎಲ್ಲಾ ಕಷ್ಟವನ್ನೂ ಸಹಿಸಿಕೊಂಡಳು. ಬಂದ ಕಷ್ಟವನ್ನೆಲ್ಲಾ ಎದುರಿಸಿದಳು, ಎಂದೂ ಧೈರ್ಯಗುಂದಲಿಲ್ಲ.

ಸೀತೆಯು ರಾಮನಿಲ್ಲದೆ ತಾನು ಬದುಕುತ್ತೇನೆಂದು, ಹೆಣ್ಣು ಗಂಡಿನ ಆಸರೆ ಇಲ್ಲದೆ ಬದುಕಬಹುದೆಂದು ತೋರಿಸಿಕೊಟ್ಟಳು, ತಾನು ಎಂದೆಂದೂ ಪವಿತ್ರಳಾದವಳೆಂದು ಜಗತ್ತಿಗೆ ತೋರಿಸಿಕೊಟ್ಟಳು. ಸೀತೆಯಲ್ಲಿ ನಾನು ಕಂಡ ದೋಷ ರಾಮನನ್ನು ಅತಿಯಾಗಿ ಪ್ರೀತಿಸಿದ್ದು ಮತ್ತು ಲಕ್ಷ್ಮಣನನ್ನು ಅವಮಾನಿಸಿ ಮಾತನಾಡಿದ್ದು.

ಲಕ್ಷ್ಮಣನ ಬಗ್ಗೆ ನನಗೆ ಮೊದಲಿನಿಂದಲೂ ಸಹ ಒಳ್ಳೆಯ ಅಭಿಪ್ರಾಯವಿತ್ತು. ಈ ಪುಸ್ತಕ ಆ ಅಭಿಪ್ರಾಯಕ್ಕೆ ಮತ್ತಷ್ಟು ಪುಷ್ಠಿ ನೀಡಿದೆ. ಈತ ಅಣ್ಣ - ಅತ್ತಿಗೆಯರ ಸೇವೆಗಾಗಿ ತನ್ನ ಹೆಂಡತಿಯನ್ನು ಬಿಟ್ಟು ಅರಣ್ಯಕ್ಕೆ ಹೊರಟ. ಇದು ಮೆಚ್ಚುವಂತದು. ಆದರೆ ಲಕ್ಷ್ಮಣ ರಾಮನಂತೆ ಹದಿನಾಲ್ಕು ವರ್ಷ ಒಬ್ಬಂಟಿಗಳಾಗಿ ಇದ್ದಂತಹ ಊರ್ಮಿಳೆಯ ಮೇಲೆ ಅನುಮಾನ ಪಡಲಿಲ್ಲ. ಈತ ನಾನು ಕಾಡಿನಲ್ಲಿ ಇದ್ದಾಗ ಊರ್ಮಿಳೆ ಏನು ಮಾಡುತ್ತಿದ್ದಳೋ ಎಂದು ಅವಳ ನಡವಳಿಕೆಯ ಬಗ್ಗೆ ಸಂಶಯ ಪಡಬಹುದಿತ್ತು. ಆದರೆ ಆತ ಅಷ್ಟು ಕೀಳು ಮಟ್ಟಕ್ಕೆ ಇಳಿಯಲಿಲ್ಲ. ಬದಲಾಗಿ ಹೆಂಡತಿಯನ್ನು ಸಂತಸದಿಂದ ಆಲಂಗಿಸಿದ.

ನಾನು ಮೊದಲು ರಾವಣನನ್ನು ಕಂಡರೆ ದ್ವೇಷಿಸುತ್ತಿದ್ದೆ, ಅವನ ಹೆಸರು ಕೇಳಿದೊಡನೆಯೇ ಮೈ ಉರಿಯುತ್ತಿತ್ತು. ಆತನ ಬಗ್ಗೆ ಯಾರಾದರೂ ಮೆಚ್ಚುಗೆ ವ್ಯಕ್ತಪಡಿಸಿದರೆ ತುಂಬಾ ಸಿಟ್ಟು ಬರುತಿತ್ತು. ಆದರೆ ಈ ಪುಸ್ತಕದಿಂದ ನಾನು ನನ್ನ ಮೊದಲಿನ ಅಭಿಪ್ರಾಯವನ್ನು ಕೈ ಬಿಡಬೇಕಾಗಿದೆ. ಒಂದು ವಿಧದಲ್ಲಿ ಈತ ರಾಮನಿಗಿಂತ ಎಷ್ಟೋ ಪಟ್ಟು ಒಳ್ಳೆಯವ. ರಾಮನು ವರಿಸಿದ ಸೀತೆಯನ್ನೂ ಸಹ ಮಡದಿಗಿಂತ ಹೆಚ್ಚು ಪ್ರೀತಿಸಲು ಸಿದ್ಧನಿದ್ದ. ರಾವಣ, ಸೀತೆ ಒಬ್ಬಂಟಿಗಳಾಗಿದ್ದರೂ ಆಕೆಯನ್ನು ಬಲವಂತವಾಗಿ ಒಲಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಈ ವಿಷಯದಲ್ಲಿ ಇವನನ್ನು, ಇವನ ಗುಣವನ್ನು ಮೆಚ್ಚಲು ತುಂಬಾ ಸಂತೋಷ.

ಇವನ ಬಗ್ಗೆ ನನಗೆ ಇನ್ನೂ, ಇವತ್ತಿಗೂ ಅಸಮಾಧಾನ ತರುವ ಅಂಶವೆಂದರೆ ಸೀತೆಗಾಗಿ ಸಮೃದ್ಧಿಯ, ಸಂಪತ್ತಿನ ಲಂಕೆಯನ್ನು ಹಾಳು ಮಾಡಿದ್ದು ಹಾಗೂ ಪತಿವ್ರತೆಯಾದ ಮಂಡೋದರಿಯನ್ನು ನೋಯಿಸಿದ್ದು.

ರಾಮ ಆಡಳಿತದಲ್ಲಿ, ಪ್ರಜಾಹಿತಾಸಕ್ತಿಯಲ್ಲಿ ಆದರ್ಶ ವ್ಯಕ್ತಿಯಾಗಿ ಕಂಡರೂ ಸಹ ಸೀತೆಯಂತ ಮಾನಿನಿಗೆ ಯೋಗ್ಯನಾದ ಗಂಡನಾಗಲಾರನು ಮತ್ತು ಯಾರೂ ಸಹ ರಾಮನಂತ ಗಂಡಬೇಕೆಂದು ಪೂಜೆ ಮಾಡಿಸಿಕೊಳ್ಳಲು ಈತ ಅರ್ಹನಲ್ಲ. ನನ್ನ ಪ್ರಕಾರ ರಾಮನಂತ ಗಂಡ ಯಾವ ಹೆಣ್ಣಿಗೂ ಬೇಡ. ಕೆಲವು ಹೆಣ್ಣು ಮಕ್ಕಳನ್ನು ರಾಮನಂತ ಗಂಡ ಬೇಕೆಂದು ಪೂಜೆಮಾಡುತ್ತಾರೆ. ಯಾರಾದರೂ ಪೂಜಿಸಲಿ ನಾನಂತು ಪೂಜಿಸುವುದಿಲ್ಲ.

(ಈ ಭಾವನೆಗಳು ನನ್ನಲ್ಲಿ ಮೂಡಲು ಕಾರಣವಾದ ಈ ಎರಡು ಕೃತಿಗಳಿಗೆ, ಮತ್ತು ಲೇಖಕಿ ಶ್ರೀಮತಿ ಸಾವಿತ್ರಮ್ಮನವರಿಗೆ ನಾನೆಂದೂ ಚಿರಋಣಿಯಾಗಿರುತ್ತೇನೆ. ಆ ಬೆಳಕಿನಲ್ಲಿ ಮುನ್ನಡೆಯುತ್ತೇನೆ.)

ವೇದಾವತಿ. ಹೆಚ್.
ದ್ವಿತೀಯ ಪಿ.ಯು.ಸಿ
ಸರ್ಕಾರಿ ಪದವಿ ಪೂರ್ವ ಕಾಲೇಜು
ಸಿದ್ದರಾಮನಹುಂಡಿ
ಮೈಸೂರು ॥ತಾ॥

ನೂರು ಪ್ರಶ್ನೆ

ದಾರಿ ಅಕ್ಕ ಪಕ್ಕ ಗಿಡಬಳ್ಳಿಪೊದೆ
ಪ್ರಕೃತಿ ಆಸ್ವಾದನೆಗೆ ಅಡೆತಡೆ
ಪಂಚೆ ಎತ್ತುವವರು
ಚಡ್ಡಿ ಸರಿಸುವವರು
ಪ್ಯಾಂಟು ಸಡಿಲಿಸುವವರು
ಪಾಪ ! ಪ್ರಕೃತಿ ಕರೆ
ದಿನಾ ಒಂದೊಂದು ಪರಿ
ಮುಜುಗರ ಬೇಸರ ಕಿರಿಕಿರಿ

ಮಿಡಿ ಚೂಡಿಗಳ ಬಳಗಕ್ಕೆ
ಗೌರಿಸಂಹಿತೆಯ ಪಾಠ
ಮರ್ಯಾದೆ ಮಹಲಿನ ಬಂಧನ
ಕಾಮಾಲೆ ಕಣ್ಣಿಗೆ ಸುತ್ತೆಲ್ಲ ಹಳದಿ

ಅಪ್ಪ ಅಣ್ಣನ ಚಡ್ಡಿಗೆ ಅಂಗಳದ ದಾರ
ನಮ್ಮ ಒಳ ಉಡುಪಿಗೆ ಕೋಣೆ ಮೂಲೆ
ಯಾಕಮ್ಮ ಹೀಗೆ ಮಗಳ ಪ್ರಶ್ನೆ

'ಪುರಾಣ ಚರಿತ್ರೆಗಳಲಿ ಹುಡುಕು'
ಮನದ ಮಾತಿಗೆ ಮೌನ ಮುದ್ರೆ
ಹುಡುಗಿಯ ಕಣ್ಣಲ್ಲಿ ನೂರು ಪ್ರಶ್ನೆ

-ಚಂದ್ರಮತಿ ಸೋಂದಾ

ಪ್ರೇಮ - ಸಂಗಮ

(ಆಂಗ್ಲ ಕಥೆಯೊಂದರ ಅನುವಾದ)

Original : ' Appointment with Love'

ಗ್ರ್ಯಾಂಡ್ ಸೆಂಟ್ರಲ್ ಸ್ಟೇಷನ್ನಿನ ದೊಡ್ಡ ಗಡಿಯಾರ ಸರಿಯಾಗಿ 6 ಗಂಟೆಗೆ 6 ನಿಮಿಷಗಳನ್ನು ತೋರಿಸುತ್ತಿತ್ತು. ವಿಚಾರಣಾ ಕೊಠಡಿಯ ಮುಂದೆ ನಿಂತಿದ್ದ ಆ ತರುಣ ಲೆಫ್ಟಿನೆಂಟ್ ಆಫೀಸರ್ ಮತ್ತೊಮ್ಮೆ ಕಣ್ಣು ಕಿರಿದು ಮಾಡಿ ಗಡಿಯಾರವನ್ನು ವೀಕ್ಷಿಸಿದ. ಆತನ ಹೃದಯದ ಬಡಿತ ಎಷ್ಟು ಜೋರಾಗಿತ್ತೆಂದರೆ, ಅವನಿಗೇ ಅದು ಗಾಬರಿಯನ್ನುಂಟು ಮಾಡುತ್ತಿತ್ತು. ಏಕೆಂದರೆ, ಅದನ್ನು ನಿಗ್ರಹಿಸಲು ಅವನಿಗೆ ಸಾಧ್ಯವಾಗಿರಲಿಲ್ಲ. ಅದಕ್ಕೆ ಕಾರಣವಿತ್ತು. ಕಳೆದ 13 ತಿಂಗಳುಗಳಿಂದ ಅವನ ಹೃದಯವನ್ನು ಆಕ್ರಮಿಸಿದ್ದ ಹೆಣ್ಣನ್ನು ಮೊದಲಬಾರಿಗೆ ಇನ್ನು ಆರು ನಿಮಿಷಗಳಲ್ಲಿ ಅವನು ನೋಡಲಿದ್ದ. ಆಕೆಯನ್ನು ಅವನು ಇದುವರೆಗೂ ನೋಡಿರಲಿಲ್ಲ ನಿಜ, ಆದರೆ, ಆಕೆಯ ಕೈ ಬರಹ ಆ ದಿನಗಳಲ್ಲೆಲ್ಲಾ ಅವನ ಹತ್ತಿರವೇ ಇದ್ದು, ಧೈರ್ಯ ತುಂಬಿದ್ದವು ; ಅವನಿಗೆ ಬೆಂಬಲ ನೀಡಿದ್ದವು.

ಆತ ಸಾಧ್ಯವಿದ್ದಷ್ಟೂ ವಿಚಾರಣಾ ಕೊಠಡಿಯ ಪಕ್ಕಕ್ಕೇ ಸರಿದು ನಿಂತ. ಸುತ್ತಲೂ ಜನಸಂದಣಿ, ವಿಚಾರಣಾ ಗುಮಾಸ್ತರ ಬಳಿಗೆ ಹೋಗಲು ಎಲ್ಲರೂ ನೂಕುತ್ತಿದ್ದರು.

ಅವನಿಗೆ ಕೆಲವು ತಿಂಗಳುಗಳ ಹಿಂದಿನ ಯುದ್ಧ ಭೂಮಿಯ ಒಂದು ಘಟನೆ ನೆನಪಾಯಿತು. ಒಂದು ರಾತ್ರಿ ಇದ್ದಕ್ಕಿದ್ದಂತೆ ಇವನಿದ್ದ ವಿಮಾನ ಶತ್ರು ವಿಮಾನಗಳ ಮಧ್ಯೆ ಸಿಕ್ಕಿಹಾಕಿಕೊಂಡಿತು. ಕಣ್ಣೆದುರಿನಲ್ಲಿ ಶತ್ರು ವಿಮಾನ ಚಾಲಕರ ಭೀಭತ್ಸ ನಗು ಗೋಚರಿಸಿತ್ತು. ಆಗ ಆಕೆಯ ಮಾತುಗಳು ಅವನ ನೆನಪಿಗೆ ಬಂದು, ಅವನಲ್ಲಿ ಧೈರ್ಯ ತುಂಬಿದ್ದವು. ತನ್ನ ಒಂದು ಕಾಗದದಲ್ಲಿ ಆತ ತನಗೂ ಭಯವಾಗುತ್ತದೆ ಎಂಬುದನ್ನು ತೋಡಿಕೊಂಡಿದ್ದ. ಈ ಯುದ್ಧದ ಕೆಲವೇ ದಿನಗಳ ಮುನ್ನ ಆಕೆಯಿಂದ ಉತ್ತರ ಬಂದಿತ್ತು. ಆಕೆ ಬರೆದಿದ್ದಳು, " ನಿನಗೂ ಭಯವಾಗುತ್ತದೆ ಎಂಬುದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಪ್ರತಿಯೊಬ್ಬ ನಾಯಕನಿಗೂ ಭಯವಾಗಲೇ ಬೇಕು. ಭೀತಿ ಇಲ್ಲದವರು ಯಾರು ? ಹಿಂಜರಿಯುವವರೇ ಹಿರಿಯರಾಗಲು ಸಾಧ್ಯ. ನೈತಿಕ ಭಯವುಳ್ಳವರು ನೀತಿ ಮಾರ್ಗದಲ್ಲಿ ನಡೆಯುತ್ತಾರೆ. ಭೀತಿ ಇದ್ದದ್ದರಿಂದಲೇ ಡೇವಿಡ್‌ರಾಜ ತನ್ನ 23 ನೆಯ ಭಕ್ತಿಕಾವ್ಯ (psalm) ವನ್ನು ಬರೆದ. ಮತ್ತೊಮ್ಮೆ ನಿನಗೆ ಭಯವಾದಾಗ, ಧೈರ್ಯ ಕುಸಿದಾಗ, ನನ್ನ ಧ್ವನಿಯನ್ನು ಈ ಮಾತುಗಳನ್ನು ನೆನಪಿಸಿಕೊ. "ಹೌದು, ನಾನು ಸಾವಿನ ನೆರಳೆಂಬ ಕಣಿವೆಯಲ್ಲಿ ನಡೆಯುತ್ತಿದ್ದರೂ, ಯಾವುದೇ ಕೆಡುಕನ್ನು ಕುರಿತು ನಾನು ಹೆದರುವುದಿಲ್ಲ. ಏಕೆಂದರೆ, ನೀನು ಸದಾ ನನ್ನೊಂದಿಗಿರುವೆ." ಈ ಮಾತುಗಳನ್ನು ಅವಳೆಂದಂತೆ, ಅವನು ಜ್ಞಾಪಿಸಿಕೊಂಡಿದ್ದ. ಆಕೆಯ ಕಲ್ಪಿತ ಧ್ವನಿಯನ್ನೂ, ಆ ಮಾತುಗಳನ್ನೂ ಕೇಳುತ್ತಾ ಅವನಲ್ಲಿ ಧೈರ್ಯ ಉಂಟಾಗಿತ್ತು ; ಶಕ್ತಿ ಬಂದಿತ್ತು.

ಈಗ ಆಕೆಯ ನಿಜಧ್ವನಿಯನ್ನು ಅವನು ಕೇಳಲಿದ್ದ. 6 ಗಂಟೆಗೆ ಇನ್ನು 4 ನಿಮಿಷಗಳಿದ್ದವು.

ಭಾರೀ ನಕ್ಷತ್ರ ಛಾವಣಿಯ ಕೆಳಗೆ ಜನರು ಭರದಿಂದ ಓಡಾಡುತ್ತಿದ್ದರು. ಬಣ್ಣ ಬಣ್ಣದ ಅವರ ಉಡಿಗೆ ಬಣ್ಣದ ಜಾಲವನ್ನೇ ನೇಯ್ದಂತೆ ಕಾಣುತ್ತಿತ್ತು. ಹುಡುಗಿಯೊಬ್ಬಳು ಅವನ ಬದಿಯಿಂದಲೇ ನಡೆದು ಹೋದಳು. ಆಕೆ ಕೆಂಪು ಹೂವೊಂದನ್ನು ತನ್ನ ಕೋಟಿನ ಗುಂಡಿಗೆ ಸಿಗಿಸಿಕೊಂಡಿದ್ದಳು. ಒಂದು ಕ್ಷಣ ಅವನಿಗೆ ಗಾಭರಿಯಗಿತ್ತು.

ಆದರೆ ಅದು ಅವರೆಂದುಕೊಂಡಿದ್ದಂತೆ ಪುಟ್ಟ ಗುಲಾಬಿಯಾಗಿರಲಿಲ್ಲ. ಅದೂ ಅಲ್ಲದೆ, ಈ ಹುಡುಗಿ ಚಿಕ್ಕವಳು - ಬಹುಶಃ 18 ವರ್ಷಗಳಿರಬಹುದು. ಇವನ ಗೆಳತಿಯಾದರೋ 30 ವರ್ಷದ ಹೆಂಗಸು, ಅದನ್ನು ಅವಳೇ ತಿಳಿಸಿದ್ದಳು. "ಅದಕ್ಕೇನೀಗ? ನನಗೇ 32 ವರ್ಷಗಳು" - ಅಂದಿದ್ದ ಅವನು. ಅವನಿಗೆ 29 ವರ್ಷಗಳಾಗಿದ್ದವಷ್ಟೇ!

ಅವನ ಮನಸ್ಸು ಆ ಪುಸ್ತಕದೆಡೆಗೋಡಿತು. ದೇವರೇ ಅವನಿಗೆ ದಯಪಾಲಿಸಿದಂತಹ ಆ ಪುಸ್ತಕ ಸೈನಿಕರ ಗ್ರಂಥ ಭಂಡಾರದಿಂದ ಇವರ ತರಬೇತಿ ಶಿಬಿರಕ್ಕೆ ಕಳುಹಿಸಲ್ಪಟ್ಟ ನೂರಾರು ಪುಸ್ತಕಗಳಲ್ಲಿ ಅದೊಂದು. ಸೋಮರ್‌ಸೆಟ್ ಮಾಮ್ ಎಂಬ ಲೇಖಕರ 'ಆಫ್ ಹ್ಯೂಮನ್ ಬಾಂಡೇಜ್' - ಮಾನವ ಸಂಬಂಧಗಳನ್ನು ಮನಮುಟ್ಟುವಂತೆ ಹೆಣೆದ ಪುಸ್ತಕ. ಆ ಪುಸ್ತಕದ ತುಂಬೆಲ್ಲಾ ಹೆಣ್ಣೊಬ್ಬಳ ಕೈಬರಹದಲ್ಲಿದ್ದ ಟಿಪ್ಪಣಿಗಳಿದ್ದವು. ಅವನಿಗೆ ಪುಸ್ತಕಗಳಲ್ಲಿ ಅಂತಹ ಟಿಪ್ಪಣಿಗಳನ್ನು ಬರೆಯುವುದೆಂದರೆ ಆಗದು. ಆದರೆ ಇವು ಬೇರೆಯಾಗಿದ್ದವು. ಸಾಧಾರಣವಾಗಿ ಕಂಡು ಬರುವ ಟೀಕೆಗಳಂತಿರಲಿಲ್ಲ ಇವು. ಹೆಣ್ಣೊಬ್ಬಳಿಗೆ ಒಬ್ಬ ಗಂಡಸಿನ ಹೃದಯವನ್ನು ಇಷ್ಟು ನವಿರಾಗಿ ಹೊಕ್ಕು ನೋಡುವ ತಾಳ್ಮೆ ಇರಬಹುದೆಂದು ಅವನು

ಕನಸಿನಲ್ಲಿಯೂ ಎಣಿಸಿರಲಿಲ್ಲ. ಅವಳ ಹೆಸರು ಪುಸ್ತಕದ ಮೇಲಿತ್ತು. ಅವನು ನ್ಯೂಯಾರ್ಕ್‌ನ ಟೆಲಿಫೋನ್ ಪುಸ್ತಕದಿಂದ ಅವಳ ವಿಳಾಸ ಪಡೆದು ಕಾಗದ ಬರೆದ. ಕೂಡಲೇ ಅವಳೂ ಉತ್ತರಿಸಿದ್ದಳು. ಅದಾದ ಮರುದಿನವೇ ಅವನು ಕೆಲಸದಮೇಲೆ ಆ ಊರಿನಿಂದ ಹಡಗಿನಲ್ಲಿ ರವಾನಿಸಲ್ಪಟ್ಟ. ಆದರೆ ಅವರ ಪತ್ರ ವ್ಯವಹಾರ ಮುಂದುವರೆದಿತ್ತು.

13 ತಿಂಗಳುಗಳ ವರೆಗೂ ಇದು ಅವಿರತವಾಗಿ ಸಾಗಿತ್ತು. ಅನೇಕಬಾರಿ ಇವನಿಗಿಂತಲೂ ಹೆಚ್ಚು ಪ್ರಾಮಾಣಿಕವಾಗಿ ಆಕೆ ಆ ಕಾರ್ಯವನ್ನು ನಿರ್ವಹಿಸಿದ್ದಳು. ಯಾಕೆಂದರೆ, ಯುದ್ಧ ಭೂಮಿಯ ಯಾವ ಯಾವುದೋ ಮೂಲೆಗಳಲ್ಲಿರುತ್ತಿದ್ದ ಅವನಿಗೆ ಅನೇಕಬಾರಿ ಉತ್ತರಿಸಲು ಆಗುತ್ತಿರಲಿಲ್ಲ. ಆದರೂ ಆಕೆ ಬರೆಯುತ್ತಲೇ ಇದ್ದಳು. ಕಾಲಕಳೆದಂತೆ ಅವಳು ತನ್ನನ್ನು ಪ್ರೀತಿಸುತ್ತಾಳೆಂದು ಅವನು ನಂಬಿದ. ಹಾಗೇ ತಾನೂ ಅವಳನ್ನು ಪ್ರೀತಿಸುತ್ತೇನೆಂದು ಅವನಿಗೆ ಅನ್ನಿಸುತ್ತಿತ್ತು.

ಇಷ್ಟಾದರೂ, ಅವನೆಷ್ಟೇ ಬಾರಿ ಕೇಳಿಕೊಂಡರೂ ಅವಳು ತನ್ನ ಭಾವಚಿತ್ರವನ್ನು ಕಳಿಸಲು ನಿರಾಕರಿಸಿದ್ದಳು. ಅದಕ್ಕೆ ಅವಳೇ ನೀಡಿದ ಕಾರಣ, - " ನಿನಗೆ ನನ್ನ ವಿಷಯದಲ್ಲಿ ನಿಜವಾದ ಪ್ರೀತಿಯೇ ಇರುವುದಾದಲ್ಲಿ ನಾನು ಹೇಗಿದ್ದರೂ ಪರವಾಗಿಲ್ಲ. ಒಂದು ವೇಳೆ ನಾನು ಸುಂದರಳೇ ಆಗಿದ್ದರೆ, ನನ್ನ ಭಾವ ಚಿತ್ರ ನೋಡಿ, ನನ್ನ ಸೌಂದರ್ಯದಿಂದ ಆಕರ್ಷಿತನಾಗಿರುವಿ ಎಂದು ನನಗೆ ಅನಿಸಿರುತ್ತಿತ್ತು. ಆ ಭಾವನೆ ನನ್ನನ್ನು ಬೆನ್ನು ಹತ್ತಿ ಕಾಡುತ್ತಿತ್ತು. ಅಂತಹ ಪ್ರೀತಿ ನನಗೆ ಅಸಹ್ಯ ಹುಟ್ಟಿಸುತ್ತದೆ. ಒಂದು ವೇಳೆ ನಾನು ಸಾಧಾರಣಳಾಗಿದ್ದರೆ, (ಅದರೆ ಸಾಧ್ಯತೆಯೇ ಹೆಚ್ಚು), ನೀನು ನನ್ನ ಭಾವಚಿತ್ರ ನೋಡಿಯೂ ನನಗೆ ಕಾಗದ ಬರಿಯುವ ಕಾರಣ, ನಿನ್ನೊಂದಿಗೆ ಯಾರೂ ಇಲ್ಲದೆ, ನೀನು ಒಂಟಿತನವನ್ನು ಅನುಭವಿಸುತ್ತಿರುವುದು ಎಂದೇ ನನಗೆ ಅನ್ನಿಸುತ್ತಿತ್ತು. ಆದ್ದರಿಂದ ಬೇಡ ; ನನ್ನ ಚಿತ್ರವನ್ನು ಕೇಳಬೇಡ. ನೀನು ನ್ಯೂಯಾರ್ಕಗೆ ಬಂದಾಗ ನನ್ನನ್ನು ನೋಡುವೆಯಂತೆ, ಅಲ್ಲದೆ ಬೇಕಾದರೆ ನಿನ್ನ ನಿರ್ಣಯವನ್ನು ಆಗ ಮಾಡು. ನಾವಿಬ್ಬರೂ ಸ್ವತಂತ್ರರು. ಪರಸ್ಪರ ದೂರ ಸರಿಯುಲು ಅಥವಾ ಇದೇ ಭಾವನೆಗಳನ್ನು ಮುಂದುವರೆಸುತ್ತಾ ಹತ್ತಿರ ಬರಲು ಮುಕ್ತರು ಎಂಬುದನ್ನು ನೆನಪಿಡು...."

6 ಗಂಟೆಗೆ ಇನ್ನು ಒಂದು ನಿಮಿಷವಿತ್ತಷ್ಟೇ ! ಆತಂಕ ಕಳೆಯಲು ಸಿಗರೇಟು ಹಚ್ಚಿ ಒಂದು ದಮ್ಮೆಳೆದುಕೊಂಡ . ಇದ್ದಕ್ಕಿದ್ದಂತೆ ಲೆಫ್ಟಿನೆಂಟ್ ಬ್ಲಾಂಡ್ ಫೋರ್ಡ್‌ನ ಹೃದಯ, ಅವನ ವಿಮಾನವೂ ಯಾವತ್ತೂ ಹಾರದಿರುವಷ್ಟು ಎತ್ತರಕ್ಕೆ ಜಿಗಿಯಿತು.

ಕಾರಣ - ತೆಳ್ಳನೆಯ ಶರೀರದ ಕೋಮಲೆಯೊಬ್ಬಳು ಆ ಕಡೆಗೇ ಬರುತ್ತಿದ್ದಳು ; ಚಿನ್ನದ ಬಣ್ಣದ ಗುಂಗುರು ಕೂದಲು ಅವಳ ಎರಡೂ ಭುಜಗಳ ಮೇಲೆ ಇಳಿಬಿದ್ದಿತ್ತು. ಕಣ್ಣುಗಳು, ಎರಡು ನೀಲಿ ಬಣ್ಣದ ಹೂವುಗಳಂತೆ ಕಾಣುತ್ತಿದ್ದವು. ನವಿರಾದ ತುಟಿ ಹಾಗೂ ಗದ್ದಗಳು ಕೋಮಲವಾಗಿ ಕಂಡರೂ ದೃಢತೆಯನ್ನು ಬಿಂಬಿಸುವಂತಿದ್ದವು. ತಿಳಿ ಹಸಿರು ಬಣ್ಣದ ಆ ಉಡಿಗೆಯಲ್ಲಿ ಆಕೆ ವಸಂತವೇ ಮೈತಳೆದಂತಿದ್ದಳು. ಅವಸರದಿಂದ ಅವನು ಅವಳ ಕಡೆಗೆ ನಡೆದ ; ಅವಳು ಗುಲಾಬಿಯನ್ನು ಸಿಗಿಸಿಕೊಂಡಿರಲಿಲ್ಲ ಎಂಬುದನ್ನು ಗಮನಿಸದೆ. ಅವನು ಅವಳ ಹತ್ತಿರ ಬಂದಾಗ ಅವಳ ತುಟಿಯ ಮೇಲೆ ಕೆಣಕುವ ಮಂದಹಾಸ ಮಿನುಗಿತು

"ನನ್ನ ದಾರಿಗೇ ಅಡ್ಡ ಹೊರಟಿರುವಿರಾ ?" ಎಂದು ಕೇಳಿದಳು. ತಡೆಯಲಸಾಧ್ಯವೆಂಬಂತೆ, ಅವನು ಅವಳ ಕಡೆಗೆ ಇನ್ನೊಂದು ಹೆಜ್ಜೆ ಹಾಕಿದ. ಆಗ ಅವಳ ಹಿಂದಿದ್ದ, ಕೆಂಪು ಗುಲಾಬಿಯನ್ನು ಕೋಟಿನ ಗುಂಡಿಗೆ ಸಿಗಿಸಿಕೊಂಡಿದ್ದ, ಆ ಹೆಂಗಸನ್ನು ಆತ ನೋಡಿದ. ಈ ಕೋಮಲೆಯ ಹಿಂದೆಯೇ ಆಕೆ ನಿಂತಿದ್ದಳು. ಸುಮಾರು 40 ವರ್ಷ ವಯಸ್ಸು ಮೀರಿದ ಹೆಂಗಸು. ಬಿಳಿಯಾಗುತ್ತಿದ್ದ ಕೂದಲು, ಸ್ವಲ್ಪ ಸ್ಥೂಲಕಾಯವೆನಿಸಬಹುದಾದ ಶರೀರ. ಸಣ್ಣ ಹಿಮ್ಮಡಿಯ ಶ್ಯೂಗಳಲ್ಲಿ ದಪ್ಪ ಪಾದಗಳು ತುರುಕಲ್ಪಟ್ಟಿದ್ದವು. ಮುದುರಿದ, ಮಾಸಲು ಕಂದು ಬಣ್ಣದ ಕೋಟಿಗೆ ಪುಟ್ಟ ಕೆಂಪು ಗುಲಾಬಿಯೊಂದನ್ನು ಅವಳು ಸಿಗಿಸಿಕೊಂಡಿದ್ದಳು. ಹಸಿರು ಉಡಿಗೆಯ ಬೆಡಗಿ ಈಗ ದೂರ ಸರಿಯುತ್ತಿದ್ದಳು.

ಈತನಿಗೆ ತನ್ನ ಇಡೀ ಶರೀರವೇ ಎರಡಾಗಿ ಸೀಳುತ್ತಿರುವಂತೆ ಭಾಸವಾಯಿತು. ಆ ಬೆಡಗಿಯ ಹೆಜ್ಜೆಯೊಡನೆ ತನ್ನದನ್ನು ಸೇರಿಸಬೇಕೆಂಬ ಆವೇಗ ತೀವ್ರವಾಗಿತ್ತು ; ಆದರೆ, ತನ್ನ ಭಾವನೆಗಳಿಗೆ ಸ್ಪಂದಿಸಿ, ತನ್ನನ್ನು ಹುರಿದುಂಬಿಸಿ, ನಿಜವಾಗಿಯೂ ಜೊತೆಯಾದ ಹೆಣ್ಣನ್ನು ಪಡೆಯಬೇಕೆಂಬ ಆಸೆಯೂ ಅಷ್ಟೇ ತೀವ್ರವಾಗಿತ್ತು. ಎದುರಿನಲ್ಲಿ ನಿಂತಿದ್ದ ಹೆಂಗಸನ್ನು ಮತ್ತೊಮ್ಮೆ ನೋಡಿದಾಗ, ಆಕೆಯ ಕರುಣೆಪೂರಿತ ಕಣ್ಣುಗಳು, ತಾಳ್ಮೆಯ ಮುಖ ಹಾಗೂ ಪೇಲವಾದ ಮುಖದಲ್ಲಿ ಹೊಳೆಯುತ್ತಿದ್ದ ಮಾರ್ದ್ರವತೆ ಅವನಿಗೆ ಕಾಣಿಸಿದವು.

ಕೂಡಲೇ ಲೆಫ್ಟಿನೆಂಟ್ ಸ್ವಲ್ಪವೂ ತಡವರಿಸದೆ, ಕೈಯಲ್ಲಿ

ಕಾಣುವಂತೆ ಹಿಡಿದಿದ್ದ, ಹಳೆಯ ನೀಲಿ ಬಣ್ಣದ " of human bondage " ಪುಸ್ತಕವನ್ನು ಮುಂದೆ ಚಾಚಿದ. ಅವಳು, ಅವನನ್ನು ಅದರಿಂದಲೇ ಗುರುತಿಸಬೇಕಿತ್ತು. ಇದು ಕೇವಲ ಪ್ರೀತಿಯಲ್ಲ ; ಆದರೆ ಪ್ರೀತಿಗಿಂತಲೂ ಹೆಚ್ಚು ಬೆಲೆಬಾಳುವಂಥದ್ದು ; ಅಪೂರ್ವವಾದದ್ದು. ಈ ಸ್ನೇಹಕ್ಕಾಗಿ ಅವನು ಚಿರಋಣಿಯಾಗ ಬಯಸಿದ್ದ. ಆ ನೆನಪು ಬಂದ ಕೂಡಲೇ ಧೈರ್ಯದಿಂದ ಆ ಹೆಂಗಸಿನ ಮುಂದೆ ನಿಂತು, ಎದೆ ಸೆಟೆಸಿ, ಹಣೆಗೆ ಕೈತಾಗಿಸಿ ಸೆಲ್ಯೂಟ್ ಮಾಡಿ, ಪುಸ್ತಕ ಅವಳ ಮುಂದೆ ಹಿಡಿದು, ತನ್ನ ಪರಿಚಯ ಮಾಡಿಕೊಂಡ. "ನಾನು ಲೆಫ್ಟಿನೆಂಟ್ ಜಾನ್ ಬ್ಲಾಂಡ್‌ಫೊರ್ಡ್ - ನೀವು ನೀವು ಮಿಸ್ ಮೈನಲ್ ಇರಬೇಕಲ್ಲವೇ . ? ನಿಮ್ಮನ್ನು ನೋಡಿ ತುಂಬ ಸಂತೋಷವಾಗುತ್ತಿದೆ. ನಿಮ್ಮನ್ನು ನನ್ನೊಡನೆ ರಾತ್ರಿ ಊಟಕ್ಕೆ ಕರೆದೊಯ್ಯಬಹುದೇ।?"

ಆ ಹೆಂಗಸಿನ ಮುಖದಲ್ಲಿ ಆಶ್ಚರ್ಯದೊಡನೆ, ಸಹನೆಯ ನಗೆ ಮೂಡಿತು. "ಇದೆಲ್ಲಾ ಏನೆಂದು ನನಗೆ ಗೊತ್ತಾಗುತ್ತಿಲ್ಲಪ್ಪ", ಆಕೆಯೆಂದಳು, "ಹಸಿರುಡುಗೆಯ ಆಯುವತಿ - ಈಗ ತಾನೇ ಇಲ್ಲಿಂದ ಹಾದು ಹೋದಳಲ್ಲಾ ಅವಳು - ಈ ಕೆಂಪು ಗುಲಾಬಿಯನ್ನು ನನ್ನ ಕೋಟಿಗೆ ಸಿಗಿಸಿಕೊಳ್ಳುವಂತೆ ಬೇಡಿಕೊಂಡಳು. ಅದೂ ಅಲ್ಲದೆ, ನೀನೇನಾದರೂ ನನ್ನನ್ನು ನಿನ್ನೊಂದಿಗೆ ಹೋಗುವಂತೆ ಕೇಳಿಕೊಂಡರೆ, ಆಕೆ ನಿನಗಾಗಿ ರಸ್ತೆ ಆ ಬದಿಯ ದೊಡ್ಡ ಹೋಟೆಲ್ಲಿನಲ್ಲಿ ಕಾಯುತ್ತಿರುತ್ತಾಳೆಂದು ತಿಳಿಸಬೇಕೆಂದಳು. ಇದು ಎಂಥದೋ ಪರೀಕ್ಷೆ ಎಂದಳಪ್ಪ ; ಅಲ್ಲದೇ ನನಗೆ ಇಬ್ಬರು ಹುಡುಗರು, ಹೀಗೆಯೇ ಚೇಷ್ಟೆ, ಆದ್ದರಿಂದ ಅವಳ ಮಾತನ್ನು ಕೇಳಲು ನನಗೆ ಕಷ್ಟವೆನಿಸಲಿಲ್ಲ ".

ಬಿ.ಜಿ. ಮೈಥಿಲಿ

ಆಂಗ್ಲ ಉಪನ್ಯಾಸಕಿ

ಗುಲಾಬಿಗೊಂದು ಕಿವಿಮಾತು

ಪ್ರೀತಿಯ ಗುಲಾಬಿ

ಬಿಸಿಲು ಮಳೆಗೇಕೆ ಹೆದರಿಕೆ

ಇವೆಲ್ಲ ಪ್ರಕೃತಿ ನಿಯಮ

ನಿಂತ ನೆಲದ ಸಾರವ ಹೀರಿ

ಸತ್ವವ ಕಂಡುಕೋ ಗೆಳತಿ

ಪಕಳೆಗಳು ಗಟ್ಟಿಯಿದ್ದರೆ

ನಿನ್ನ ಅಸ್ತಿತ್ವಕೆ ಮೆರಗು

ಚಿವುಟುವ ಕೈಗೆ ಮುಳ್ಳಿನ ಎಚ್ಚರಿಕೆ.

ಮೊಗ್ಗ ಮುಡಿಗೇರಿಸಲು ಹಾತೊರೆತ

ಮೋಡಿಗೆ ತಾಳ ಹಾಕಿದರೆ

ತಕ್ಷಕ ವಂಶಕೆ ಆಹ್ವಾನ

ಯಾವ ಜನಮೇಜಯ ಬಂದಾನು

ಯಜ್ಞಾಹುತಿ ನೀಡಲು

ಈ ಮಣ್ಣಿನ ಕಸುಹೀರಿ

ನೀ ಅರಳುವ ದಿನಕಾಗಿ ಕಾದಿರುವೆ.

ಡಾ. ಚಂದ್ರಮತಿ ಸೋಂದಾ

'ಮಾನಸ' ನಿಮ್ಮ ಪತ್ರಿಕೆ. ನಿಮ್ಮ ಆರ್ಥಿಕ ನೆರವಿನಿಂದ ಮಾನಸ ಉಳಿಸಲು, ಬೆಳೆಸಲು ಸಾಧ್ಯ. ಚಂದಾ ನವೀಕರಿಸಿ, ಪುಸ್ತಕ ವಿಮರ್ಶೆ, ಮಹಿಳೆಯ ದೌರ್ಜನ್ಯ ಕುರಿತಾದ ವರದಿ, ಲೇಖನ, ಪದ್ಯ ಕಳಿಸಿದಲ್ಲಿ 'ಮಾನಸ'ವನ್ನು ವೈವಿಧ್ಯಮಯವಾಗಿ ತರಲು ಸಾಧ್ಯ .

ಸಂ.ಮ

ವೈವಾಹಿಕ ಸಂಸ್ಥೆ ಕುರಿತು - ಸಾರಾ ಜೋಸೆಫ್

ಸಾರಾ ಜೋಸೆಫ್ - ಲೇಖಕಿಯಾಗಿ ಹಂಚಿಕೊಂಡ ಅನುಭವಗಳನ್ನು ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ವೈವಾಹಿಕ ಚೌಕಟ್ಟು - ಸಂಸ್ಥೆಯ ಬಗ್ಗೆಗಿನ ಅವರ ಅಭಿಪ್ರಾಯಗಳನ್ನು ಮೂರನೆಯ ಭಾಗವಾಗಿ ಇಲ್ಲಿ ಪ್ರಕಟಿಸಿದ್ದೇವೆ.

ಸಾರಾರವರ 'ದಿ ಟ್ರಿ ಆಫ್ ಗುಡ್ ಎಂಡ್ ಈವಿಲ್' ಒಂದು ಕಿರು ಕಾದಂಬರಿ. ಇದರಲ್ಲಿ ಧರ್ಮ ಹಾಗೂ ನೈತಿಕತೆಯ ನಡುವಿನ ಗಡಿರೇಖೆಯ ಬಗ್ಗೆ ಚರ್ಚಿಸಲಾಗಿದೆ. ವ್ಯಕ್ತಿಯ ಲೈಂಗಿಕತೆಯ ನಿರ್ಭಂಧಿಸುವ ಧರ್ಮದ ನೈತಿಕ ಕಟ್ಟು-ಪಾಡುಗಳು, ಈ ಬಂಧನಗಳನ್ನು ಮುರಿಯಲು ಸಮರ್ಥನಲ್ಲದ ವ್ಯಕ್ತಿ ಅನುಭವಿಸುವ ದ್ವಂದ್ವಗಳನ್ನು ಈ ಕಿರು ಕಾದಂಬರಿಯಲ್ಲಿ ಚರ್ಚಿಸಲಾಗಿದೆ.

ಮದುವೆಯಾದ ನಂತರದಲ್ಲಿ ಒಬ್ಬ ಮಹಿಳೆಗೆ ಬೇರೆ ಪುರುಷನ ಬಗ್ಗೆ ಇರಬಹುದಾದ ಸ್ನೇಹತ್ವವನ್ನೂ ಪರಿಗಣಿಸದ ದೃಷ್ಟೀಕೋನ 'ಹಿಪೋಕ್ರಸಿ' ಎಂದು ಸಾರಾ ಕರೆಯುತ್ತಾರೆ. ಮದುವೆಯ ಸಂಸ್ಥೆ- ಗಂಡು ಅಥವಾ ಹೆಣ್ಣಿನ ಎಲ್ಲಾ ವ್ಯಕ್ತಿತ್ವ ಹಾಗೂ ಭಾವನೆಗಳನ್ನೂ ಯಶಸ್ವೀ ಪೂರ್ಣವಾಗಿ ತುಂಬಿಕೊಡುತ್ತದೆ ಎನ್ನುವುದು ಶುದ್ಧ ಮುರ್ಖತನ. ನಿಜವೆಂದರೆ ಹೀಗಾದಾಗ ಈ ಸಂಸ್ಥೆ ವ್ಯಕ್ತಿಗಳ ಸೃಜನಶೀಲತೆಯನ್ನು ಪ್ರಭಾವಯುತ ಪ್ರಮಾಣದಲ್ಲಿ ನಾಶಮಾಡುತ್ತಿದೆ. ಹಾಗಿದ್ದರೆ 'ಮದುವೆ', - ವಿವಾಹದ ಕೌಟುಂಬಿಕ ಸಂಸ್ಥೆಯನ್ನು ಹೇಗೆ ನೋಡುವುದು ? ಸಾರಾ ಈ ಸಂಸ್ಥೆಯಿಂದ ಉಂಟಾಗುವ ನಾಶನವನ್ನು ಕುರಿತು ಹೇಳಲೇಬೇಕಾಗುತ್ತದೆ ಎನ್ನುತ್ತಾರೆ. ಹಾಗಿದ್ದರೆ ಈ ಸಂಸ್ಥೆ ಒಂದು ಅಧ್ಯಾತ್ಮಿಕ ಭದ್ರತೆಯನ್ನು ಒದಗಿಸುವುದಿಲ್ಲವೇ ? ಇದು ಸಮಸ್ಯೆಯ ಇನ್ನೊಂದು ಮುಖವೆನ್ನುತ್ತಾರೆ ಸಾರಾ ಜೋಸೆಫ್. ಅಧ್ಯಾತ್ಮಿಕ ಭದ್ರತೆ ಬೆಳೆಯುವುದು ಹೇಗೆ ? ಒಬ್ಬರಿಗೊಬ್ಬರು ಬೆಂಬಲ ನೀಡುವಂತಹ, ಅರ್ಥಮಾಡಿಕೊಳ್ಳುವಂತಹ ಸಂಬಂಧದಲ್ಲಿ ಇದು ಸಾಧ್ಯವಾಗಬಹುದು. ಹಾಗಿಲ್ಲದಿದ್ದಾಗ ಯಾವ ರೀತಿಯ ಭದ್ರತೆ, ನೆರವು, ಬೆಂಬಲ ವೈವಾಹಿಕ ಸಂಸ್ಥೆಯೊಳಗೆ ಸಿಗುತ್ತದೆ ಎಂದು ಲೇಖಕಿ ಪ್ರಶ್ನಿಸುತ್ತಾರೆ.

ತಾಯಿಯಾಗಿರುವ ಹೆಣ್ಣು ಕೂಡಾ ವೈವಾಹಿಕ ಸಂಸ್ಥೆಯೊಳಗೆ ಸುಖಿಯಾಗಿದ್ದಾಳೆಂದು ಹೇಳಲಾಗುವುದಿಲ್ಲ. ಮಕ್ಕಳೂ ಕೂಡಾ ತಮ್ಮ ತಾಯಿಯ ಅತೃಪ್ತತೆಯನ್ನು ಗುರುತಿಸಲಾರರು. ಅಥವಾ ಅದನ್ನು ಗುರುತಿಸಲು ಅಥವಾ ಹೇಳಲು ಕೂಡಾ ಅವರು ಹಿಂಜರಿಯುತ್ತಾರೆ. ತಾಯಿಯಾದವಳು ಸಂತೋಷವಾಗಿರಲೇ ಬೇಕೆಂಬುದು ಬರೆದಿಟ್ಟರದ ನಿಯಮ. ಆಕೆ ಅಸಂತೋಷಿಯಾಗಿರಬಾರದು - ವಿಶೇಷವಾಗಿ ಲೈಂಗಿಕವಾಗಿ. ಇದು ಸಮಾಜದ ನಿಯಮ. ತಾಯಿಯ ಲೈಂಗಿಕ ಅಸಂತೋಷ - ಮಕ್ಕಳಿಗೆ ಅವಮಾನ ಮಾಡಿದ ಹಾಗೆ. ಇದು ಗಂಡನಿಗಿಂತ ಮಕ್ಕಳಿಗೇ ದೊಡ್ಡ ಸಮಸ್ಯೆಯಾಗುತ್ತದೆ ಎಂದು ಸಾರಾ ಅಭಿಪ್ರಾಯ ಪಡುತ್ತಾರೆ.

'ಹಿಜಡಾ' ಕಥೆ ಬರೆದ ಮಲೆಯಾಳಿ ಲೇಖಕ ಮಹಿಳೆಯರ ವಿರುದ್ಧ ತೆಗೆದುಕೊಂಡಿರುವ ನಿಲುವನ್ನು ಸಾರಾ ಟೀಕಿಸುತ್ತಾರೆ. ಮಹಿಳೆ ಲೈಂಗಿಕ ಅಸಂತೋಷವನ್ನು ಪ್ರಕಟಿಸಿದರೆ ಅದೊಂದು ಅಪರಾಧವೇ ಆಗಿಬಿಡುತ್ತದೆ. ಆದರೆ ಪುರುಷ ಇಂತಹ ಸಂದರ್ಭದಲ್ಲಿ ಅನೇಕ ಆಯ್ಕೆಗಳನ್ನು ಹೊಂದಿರುತ್ತಾನೆ. ವೈವಾಹಿಕ ಸಂಸ್ಥೆಯ ಒಳಗಿದ್ದೇ ಆತ ಆಯ್ಕೆಗಳನ್ನು ಮಾಡಿಕೊಳ್ಳಬಹುದಾಗಿದೆ. ಆತ ವೇಶ್ಯಾವಾಟಿಕೆ ಕೇಂದ್ರಕ್ಕೆ ಹೋಗಬಲ್ಲ, ಮತ್ತೊಬ್ಬಳನ್ನು ಇಟ್ಟುಕೊಂಡಿರಬಲ್ಲ. ಮತ್ತೊಬ್ಬಳನ್ನು ಮದುವೆಯಾಗಬಲ್ಲ ಇತ್ಯಾದಿ. ಆತನಿಗೇನನಿಸುತ್ತದೆಯೋ ಅದನ್ನು ಮಾಡುವ ಸ್ವಾತಂತ್ರ್ಯ ಆತನಿಗಿದೆ. ಈ ಅನುಭವಗಳನ್ನು ಕುರಿತು ಆತ ಮುಕ್ತವಾಗಿ ಕಥೆಯನ್ನೂ ಬರೆಯಬಲ್ಲ, ಪದ್ಯಗಳನ್ನು ಬರೆದು ಮುಕ್ತವಾಗಿ ಮಾತನಾಡಬಲ್ಲ ; ಆದರೆ ಅತ್ಯಂತ ಧಾರುಣ ಸ್ಥಿತಿಯಲ್ಲಿರುವ ಹೆಂಗಸು ಇದ್ಯಾವುದನ್ನೂ ಮಾಡಲಾಗದು. ಎಷ್ಟು ಜನ ಮಹಿಳೆಯರು ಲೈಂಗಿಕತೆಯ ಬಗ್ಗೆ ಮುಕ್ತವಾಗಿ ಮಾತನಾಡಬಲ್ಲರು ? ರಾಜಕೀಯದ ಭಾಗವಾಗಿ ಇಂತಹ ಪ್ರಶ್ನೆಗಳು ಚರ್ಚೆಯಾಗುವುದೇ ಇಲ್ಲ. ಮಹಿಳಾ ಲೇಖಕಿಯರೂ ಇಂತಹವುಗಳನ್ನು ಮುಕ್ತವಾಗಿ ಒಪ್ಪಿಕೊಳ್ಳುವುದಿಲ್ಲ.

ಇಂತಹವುಗಳನ್ನು ಮಾತನಾಡಿದರೆ, ಚರ್ಚೆ ಮಾಡಿದರೆ, ನಂಬಿದರೆ ನಾವು ವಾಪಸ್ಸು ಮನೆಗಳಿಗೆ ಹೇಗೆ ಹೋಗುವುದು ಎಂಬ ಪ್ರಶ್ನೆ ಉಂಟಾಗುತ್ತದೆ. ಈ ವಿಚಾರದಲ್ಲಿ ಕೊನೆಗೆ ನಮ್ಮ ಜೊತೆಗಾರರಿಗೆ - ನಮ್ಮ ದೇಹದ ಬಗ್ಗೆ ಮಾತನಾಡುವ, ಚರ್ಚೆ

ಮಾಡುವ ಹಕ್ಕು ನಮಗಿದೆ ಎಂಬುದನ್ನಾದರೂ ಮನದಟ್ಟು ಮಾಡಿಕೊಡಬೇಕಾಗುತ್ತದೆ ಎಂದು ಸಾರಾ ಅಭಿಪ್ರಾಯ ಪಡುತ್ತಾರೆ. ತಮಗೂ ತಮ್ಮ ದೇಹದ ಬಗ್ಗೆಯೇ ತಿಳಿದಿರಲಿಲ್ಲವೆನ್ನುವ ಲೇಖಕಿ - ಡಾ.ಎ.ಕೆ. ಜಯಶ್ರೀ ಯವರು ಮಹಿಳೆಯ ದೇಹ ಕುರಿತು ಮಾತನಾಡಿದಾಗ ತಮಗೆ ಎಷ್ಟೋ ವಿಚಾರಗಳು ತಿಳಿದದ್ದು ಎಂದು ಪ್ರಾಮಾಣಿಕವಾಗಿ ನುಡಿಯುತ್ತಾರೆ. ತಾವು ಒಬ್ಬ ಸ್ತ್ರೀ - ವಾದಿ ಯಾಗಿಯೇ ಈ ಬಗ್ಗೆ ಏನೂ ತಿಳಿದಿರಲಿಲ್ಲವೆಂದರೆ - ಇತರ ಮಹಿಳೆಯರಿಗೆ ಈ ಬಗ್ಗೆ ಎಷ್ಟು ಪರಿಜ್ಞಾನವಿರಬಹುದು ಎನ್ನುವ ಪ್ರಶ್ನೆ ತಮ್ಮಲ್ಲಿ ಮೂಡುತ್ತದೆ ಎನ್ನುತ್ತಾರೆ.

ಧರ್ಮದ ಕಡೆಗೆ ತಿರುಗಿ ಈ ಪ್ರಶ್ನೆಗಳಿಗೆ ಉತ್ತರ ಹುಡುಕುವುದು ಕಷ್ಟವಾಗುತ್ತದೆ. ಏಕೆಂದರೆ ಧರ್ಮದ ಪ್ರಕಾರ ಎಲ್ಲಾ ಧರ್ಮಗಳಿಗೆ ಈ ಶರೀರ ಒಂದು ಪಾಪದ ಕೂಪ. ಶರೀರವನ್ನು ನೋಡಿಕೊಳ್ಳುವುದೇ ಪಾಪ, ಅದನ್ನು ಮುಟ್ಟುವುದಂತೂ ಧರ್ಮದ ಪ್ರಕಾರ ಇನ್ನೂ ಪಾಪ. ಹಾಗಿದ್ದರೆ ನೈತಿಕ ಚೌಕಟ್ಟು ಎನ್ನುವುದು ಅಗತ್ಯವೇ ಇಲ್ಲವೇ ? ನೈತಿಕತೆ ಎನ್ನುವುದು ಕೆಲವು ವೇಳೆ ಶೋಷಣಾತ್ಮಕವಾಗಿರಬಹುದು. ಆದರೆ ಅದನ್ನು ಮೀರಲು ಪ್ರಯತ್ನಿಸಬೇಕು. ಅದು ಬದಲಾವಣೆಗೊಳ್ಳಬೇಕು. ಆದರೆ ನೈತಿಕ ಮೌಲ್ಯಗಳು ಶಾಶ್ವತನೆಂಬಂತೆ ಪ್ರಕಟಿತಗೊಳ್ಳುತ್ತವೆ. ಯಾವುದೇ ಮೌಲ್ಯ ಶಾಶ್ವತವಲ್ಲ. ಯಾವ ಮೌಲ್ಯಕ್ಕೂ ಶಾಶ್ವತತೆ ಎನ್ನುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಮೌಲ್ಯಗಳು - ಆರ್ಥಿಕ ರಚನೆಗಳು ಸಾಮಾಜಿಕ, ರಾಜಕೀಯ ರಚನೆಗಳು ಬದಲಾದ ಹಾಗೆ ಬದಲಾವಣೆ ಹೊಂದುತ್ತವೆ. ಹೀಗೆ ಬದಲಾವಣೆ ಆದಾಗ ಬದಲಾಗದ ನೈತಿಕ ಕಟ್ಟು - ಪಾಡುಗಳು ಶೋಷಿತವಾಗಿ ಉಳಿಯುತ್ತವೆ ಎಂದು ಸಾರಾ ಜೋಸೆಫ್ ಅಭಿಪ್ರಾಯ ಪಡುತ್ತಾರೆ.

ಈ ಬಗ್ಗೆ ಯಾವುದೇ ಚರ್ಚನ ಜೊತೆಗೆ ತಾವು ಚರ್ಚೆ ನಡೆಸಿಲ್ಲವೆಂದು ನುಡಿಯುವ ಲೇಖಕಿ - ಪ್ರಾಮಾಣಿಕವಾಗಿ ಹೇಳಬೇಕೆಂದರೆ - ಈ ವರೆಗೆ ಧರ್ಮ ತಮ್ಮನ್ನು ಅಡ್ಡಿ ಪಡಿಸಿಲ್ಲವೆನ್ನುತ್ತಾರೆ. ಬಹುಶಃ ಸತ್ಯ ನುಡಿಯುವುದಕ್ಕೆ ತಮಗೆ ಬಿಟ್ಟಿರುವುದೇ ಒಂದು ನೇತ್ಯಾತ್ಮಕ ಅಂಶ ಎಂದು ತಾವು ಗುರುತಿಸಬಹುದು ಎನ್ನುತ್ತಾರೆ. ಅಥವಾ ಧರ್ಮ ತಮ್ಮನ್ನು ನಿರ್ಲಕ್ಷಿಸಿರಬಹುದು. ಅಥವಾ ಈ ಎಲ್ಲಾ ಪ್ರಶ್ನೆಗಳು ಮತ್ತೆ ತಲೆ ಎತ್ತಬಹುದು. ಈ ಬಗ್ಗೆ ಏನೂ ತಮಗೆ ಗೊತ್ತಿಲ್ಲ ಎಂದು ಸಾರಾ ನುಡಿಯುತ್ತಾರೆ.

ಸಂದರ್ಶನ
- ಗೀತಾ ಹರಿಹರನ್
From
Just Between us

Edited by
Ammu Joseph, Vasantha Kananbiram, Ritu menon, Gowri Selvi, Volga

'ಪತಿವ್ರತೆ' ಯರು ವ್ಯವಸ್ಥೆಯಲ್ಲೊಂದು ವ್ಯಂಗ್ಯ !

ಡಾ. ವಿಜಯ

ಈ ಹಿಂದೆ ಅಹಲ್ಯೆಯ ಪ್ರಸಂಗವನ್ನು ಬೇರೆಬೇರೆ ಮಗ್ಗುಲಿನಿಂದ ನೋಡುವ ಪ್ರಯತ್ನ ಮಾಡಿದ್ದೆವು. ಇಂಥ ಪ್ರಸಂಗಗಳಲ್ಲಿ ಒಂದು ಮುಖ್ಯ ವಿಷಯವನ್ನು ಗಮನಿಸಿ. 'ಪತಿವ್ರತೆ'ಯನ್ನು ಸಮೀಪಿಸಿದ ಅನ್ಯ ಪುರುಷನು ಆಕೆಯ ಪತಿಯ ವೇಷದಲ್ಲಿ ಬರುತ್ತಾನೆ. ಆಕೆ ಮುಗ್ಧೆ, ಪತಿಯೆಂದೇ ಪರಿಗ್ರಹಿಸಿದಳು ಎಂಬುದನ್ನು ಒತ್ತಿ ಒತ್ತಿ ಹೇಳುವ ಪ್ರಯತ್ನವಿರುತ್ತದೆ. ಇಂಥ ಸಂದರ್ಭದಲ್ಲಿ ಹೇಳಿದ್ದನ್ನೆಲ್ಲ ಹಾಗೆ ಹಾಗೇ ಒಪ್ಪಿಕೊಳ್ಳಬೇಕೆ ? ಒಳಗೆ ಏಳುವ ಹತ್ತಾರು ಪ್ರಶ್ನೆಗಳಿಗೆ ಉತ್ತರ ಹುಡುಕಬೇಕೆ ? ಅಥವಾ ಹಾಗೊಂದು ತಿರುವು, ತೀರ್ಮಾನ ತೆಗೆದುಕೊಂಡು 'ಕತೆ' ಕಟ್ಟಿದ ವ್ಯವಸ್ಥೆಯ ಜಾಣತನವನ್ನು ಚರ್ಚೆಗಿಡಬೇಕೆ ?ಇದು ಬಹಳ ವ್ಯಾಪಕವಾದ ಚರ್ಚೆಗೆ ಒಳಗಾಗುವ ವಿಷಯ. ಇರಲಿ.

ಆದರೆ ಇಂಥದೇ ಕಥೆಗಳನ್ನು ಶಿಷ್ಟಜನಪದ ಕತೆಗಳಲ್ಲಿ ಹಲವು ರೂಪದಲ್ಲಿ ಕಾಣುತ್ತೇವೆ ಎಂಬುದು ಪ್ರಸ್ತುತ ಲೇಖನದ ಚರ್ಚೆಯ ವಿಷಯ.

ಜನಪದ ಕತೆಗಳಿಗೆ ನಿರ್ದಿಷ್ಟವಾದ ಉದ್ದೇಶ, ವ್ಯವಸ್ಥಿತವಾದ ಕಥಾಹಂದರ ಇರಬೇಕೆಂದಿಲ್ಲ. ಮತ್ತು ಅವು ಏನನ್ನಾದರೂ ಆ ಮೂಲಕ ಹೇಳಲೇಬೇಕೆಂಬ ಹಟವೂ ಇಲ್ಲ. ಕೇಳುಗ-ಓದುಗ

ಅಥವಾ ಸೈದ್ಧಾಂತಿಕ ನೆಲೆಗೆ ಎಲ್ಲವನ್ನೂ ಒಗ್ಗಿಸಬಯಸುವವರು ವಿಶೇಷ ಅರ್ಥಗಳನ್ನು ಕೊಡಬಹುದು. ಆದರೆ ಜನಪದ ಕತೆಗಳಲ್ಲಿ ಸ್ತ್ರೀ ಕೇಂದ್ರಿತ ಕತೆಗಳು ಎಂತಲೇ ಗುರುತಿಸಬಹುದಾದ ಕತೆಗಳಿವೆ, ಗುರುತಿಸಿ ವ್ಯಾಖ್ಯಾನಿಸಿದ್ದಾರೆ. ಹಲವು ಪಂಗಡಗಳಾಗಿ ವಿಭಾಗಿಸಿದ್ದಾರೆ. ಅವುಗಳಲ್ಲಿ ಹೆಣ್ಣಿನ ಶೀಲ, ಪಾವಿತ್ರ್ಯದ ಬಗೆಗಿನ ಪರಿಕಲ್ಪನೆಯನ್ನು ಕುರಿತಂತೆಯೂ ವ್ಯಾಖ್ಯಾನಿಸಲಾಗಿದೆ. ಇವುಗಳಲ್ಲಿ ಕೆಲವು ಶಿಷ್ಟ ಸಮಾಜದಲ್ಲಿ ಸ್ತ್ರೀಯರ ಶೀಲ-ಪಾತಿವ್ರತ್ಯಗಳ ಬಗ್ಗೆ ಇರುವ ಪರಿಕಲ್ಪನೆಯನ್ನು ವಿಡಂಬಿಸುತ್ತವೆ.

ಈಚೆಗೆ 'ನಾಗಮಂಡಲ' ಎಂಬ ಜಾನಪದ ಕತೆಯೊಂದು ಸಾಕಷ್ಟು ಪ್ರಚಾರಕ್ಕೆ ಬಂದಿದೆ. ಗಿರೀಶ್‌ಕಾರ್ನಾಡರು ಅದೇ ಹೆಸರಿನ ನಾಟಕ ಬರೆದಿದ್ದಾರೆ. ಶಂಕರ್‌ನಾಗ್ ಸೊಗಸಾಗಿ ಅಭಿನಯಿಸಿ ನಿರ್ದೇಶಿಸಿದ್ದರು. ಇದೇ ಕಥೆಯನ್ನು ಇನ್ನೊಂದು ರೀತಿಯಲ್ಲಿ ಅರ್ಥೈಸಿಕೊಂಡ ಚಂದ್ರಶೇಖರ ಕಂಬಾರರು 'ಸಿರಿಸಂಪಿಗೆ' ಎಂಬ ನಾಟಕ ಬರೆದಿದ್ದಾರೆ. ಪ್ರದರ್ಶನವಾಗಿದೆ. ಈಚೆಗೆ ಟಿ.ಎಸ್.ನಾಗಾಭರಣ ಅವರ ನಿರ್ದೇಶನದಲ್ಲಿ ಚಲನಚಿತ್ರವೂ ಆಗಿದೆ. ಇಲ್ಲೆಲ್ಲ ಆ ಕೃತಿಯ ಹಿಂದೆ ಕೆಲಸಮಾಡುವ ಸೃಜನಶೀಲ ಮನಸ್ಸು ತನಗೆ ಸರಿಕಂಡ ರೀತಿಯಲ್ಲಿ ಕಥಾವಸ್ತುವನ್ನು ವ್ಯಾಖ್ಯಾನಿಸಿಕೊಂಡಿದೆ. ಆ ಬಗ್ಗೆ ಇಲ್ಲಿ ವಿವರಿಸಿ ಹೇಳುವುದಕ್ಕೆ ಸ್ಥಳಾವಕಾಶವಿಲ್ಲ.

ಜನಪದ ಕಥೆಯಲ್ಲಿ ಇರುವ ಅಂಶ ಸ್ಥೂಲವಾಗಿ ಹೀಗಿದೆ : ಕಾಮಾಕ್ಷಿ ಎಂಬ ನಾಯಕಿ. ಗಂಡನಿಗೆ ಆಕೆ ಬೇಕಿಲ್ಲ. ಆತ ವೇಶ್ಯೆಯ ಸಹವಾಸದಲ್ಲಿ ಮೈ ಮರೆತು ಹೆಂಡತಿಯನ್ನು ಲಕ್ಷಿಸದವನು. ಎಲ್ಲ ಸಂಕಟವನ್ನು ಮೌನವಾಗಿದ್ದು ಸಹಿಸುವ ಕಾಮಾಕ್ಷಿಯ ಬಗ್ಗೆ ಕನಿಕರಗೊಂಡ ಮುದುಕಿಯೊಬ್ಬಳು ಪತಿವಶೀಕರಣದಂತ ಮೂಲಿಕೆ ನೀಡಿ ಕಷಾಯ ಮಾಡಿ ಗಂಡನಿಗೆ ಕುಡಿಸಲು ಹೇಳುತ್ತಾಳೆ. ಕಾಮಾಕ್ಷಿ ಆ ಮೂಲಿಕೆಯನ್ನು ಪಾಯಸದಲ್ಲಿ ಹಾಕಿ ಕುದಿಸಿದಾಗ ಅದು ರಕ್ತದಂತೆ ಕೆಂಪಾಗುತ್ತದೆ. ಭಯಗೊಂಡ ಆಕೆ ಅದನ್ನು ಮನೆಯ ಹಿಂದೆ ಇದ್ದ ಹುತ್ತದಲ್ಲಿ ಸುರಿದು ಬಿಡುತ್ತಾಳೆ. ಆ ಹುತ್ತದಲ್ಲಿ ವಾಸವಾಗಿದ್ದ ಐದು ಹೆಡೆಯ ಸರ್ಪವು ಅದನ್ನು ಹೀರಿಕೊಂಡು ಬಿಡುತ್ತದೆ. ಅದಕ್ಕೆ ಕಾಮಾಕ್ಷಿಯ ಮೇಲೆ ಪ್ರೀತಿ ಉಂಟಾಗುತ್ತದೆ. ಕಾಮರೂಪಿಯಾದ ಸರ್ಪವು ರಾತ್ರಿ ವೇಳೆ ಆಕೆಯ ಗಂಡನಿಲ್ಲದಾಗ ಆತನ ಹಾಗೆ ವೇಷಧರಿಸಿ ಬರುತ್ತದೆ. ಆಕೆ ಗಂಡನೆಂದೇ ಭಾವಿಸಿ ಸರ್ಪವನ್ನು ಸೇರುತ್ತಾಳೆ. ಕೆಲಕಾಲದ ಅನಂತರ ಗರ್ಭಿಣಿಯಾಗುತ್ತಾಳೆ. ಇಲ್ಲಿಂದಾಚೆಗೆ ಅವಳಿಗೆ ರಹಸ್ಯವೇನಿಲ್ಲ. ಸರ್ಪವು ನಿಜರೂಪ ತೋರಿಸಿ ಆಕೆಗೆ ಮುಂದೆ ಏನೇ ಕಷ್ಟಬಂದರೂ ನೆರವಾಗುವುದಾಗಿ ತಿಳಿಸುತ್ತದೆ.

ಹೆಂಡತಿ ತನ್ನ ಸಂಪರ್ಕವೇ ಇಲ್ಲದೆ ಗರ್ಭಿಣಿ ಆದುದರ ಬಗ್ಗೆ ಗಂಡ ಊರ ಹಿರಿಯರಲ್ಲಿ ದೂರುತ್ತಾನೆ. ಪಂಚಾಯಿತಿ ಕಟ್ಟೆಯಲ್ಲಿ ನ್ಯಾಯ ಕೇಳುವ ಸಂದರ್ಭ ಬರುತ್ತದೆ. ಆಕೆ ತನ್ನ ಗಂಡನಿಂದಲೇ ಗರ್ಭ ಧರಿಸಿದ್ದೇನೆಂದೂ ಅದನ್ನು ದೃಢೀಕರಿಸಲು ತಾನು ಶಿವಾಲಯದಲ್ಲಿ ವಾಸವಾಗಿರುವ ಸರ್ಪವನ್ನು ಹಿಡಿದು ದಿವ್ಯ ಮಾಡುತ್ತೇನೆಂದೂ ಹೇಳುತ್ತಾಳೆ. ಸರ್ಪವು ಇವಳನ್ನು ಕಚ್ಚದೆ, ಮಾಲೆಯಾಗಿ ತೂಗುಬಿದ್ದು ಐದೂ ಹೆಡೆಬಿಚ್ಚಿ ತೋರುತ್ತದೆ. ಜನರಿಗೆ ಇದೊಂದು ಪವಾಡವಾಗಿ ತೋರಿ ಆಕೆಯನ್ನು ಮಹಾಪತಿವ್ರತೆ, ದೈವಾಂಶ ಇರುವ ಸ್ತ್ರೀ ಎಂದು ಹೇಳಿ ಕೊಂಡಾಡುತ್ತಾರೆ. ಬೇರೆ ದಾರಿ ಇಲ್ಲದೆ ಗಂಡನೂ ಒಪ್ಪಿಕೊಳ್ಳುತ್ತಾನೆ. ಅವರ ಮಗು ಬೆಳೆದಂತೆ ಅದರ ಆಟ ಪಾಠಗಳಲ್ಲಿ ಮೈಮರೆತು ವೇಶ್ಯೆಯನ್ನು ಮರೆಯುತ್ತಾನೆ. ಇದರಿಂದ ಆತಂಕಗೊಂಡ ವೇಶ್ಯೆಯು 'ತಾನು ಒಮ್ಮೆ ನೋಡಿ ಮುದ್ದು ಮಾಡಿ ಕಳಿಸುತ್ತೇನೆ ಮಗನನ್ನು ಕಳಿಸಿಕೊಡಿ' ಎಂದು ಹೇಳಿಕಳಿಸುತ್ತಾಳೆ. ಈಗ ಸರ್ಪರಾಜನು ಹೇಳಿಕೊಟ್ಟ ಉಪಾಯದಂತೆ ಕಾಮಾಕ್ಷಿಯು ಮಗುವನ್ನು ಒಡವೆ ಹಾಕಿ ಕಳಿಸುವಾಗ ತೂಕಮಾಡಿ, ಅದು ಹಿಂತಿರುಗಿ ಬಂದಮೇಲೂ ತೂಕ ಮಾಡಿ ನೋಡಿ ಒಂದೇ ಒಂದು ಗುಲಗುಂಜಿಯಷ್ಟು ಕಡಿಮೆಯಾಗಿದ್ದರೂ ಆಕೆ ತನ್ನ ಮನೆಗೆ ನೀರು ಹೊರುವ ದಾಸಿಯಾಗಬೇಕು ಎಂಬ ಶರತ್ತು ಹಾಕುತ್ತಾಳೆ. ಅದನ್ನು ಒಪ್ಪಿ ಕರೆದೊಯ್ದಳು ವೇಶ್ಯೆ. ಆದರೆ ಕರೆತಂದಾಗ ಕೆಲವು ಒಡವೆಗಳು ಕಾಣೆಯಾಗಿದ್ದವು. ಮಗುವಿನ ತೂಕ ಕಡಿಮೆ ಆಯಿತು. ವೇಶ್ಯೆ ದಾಸಿಯಾದಳು. ಇಲ್ಲೆಲ್ಲ ಸರ್ಪರಾಜನೇ ಉಪಾಯದಿಂದ ಎಲ್ಲವನ್ನೂ ನಿರ್ವಹಿಸುತ್ತಾನೆ. ಅನಂತರ ಗಂಡ-ಹೆಂಡಿರು ಒಂದಾಗುತ್ತಾರೆ. ಗಂಡ, ಮಗುವಿನೊಂದಿಗೆ ಅತ್ಯಂತ ಸುಖಿಯಾಗಿ ಬದುಕುವ ಆಕೆ ತನ್ನ ಪಾಲಿಗೆ ಇಲ್ಲವಾದಳಲ್ಲಾ ಎಂಬ ದುಃಖ - ಅಸೂಯೆಗಳಿಂದಾಗಿ ನಾಗರಾಜನು (ಮರಾಸದಿಂದ ಇಳಿದಿದ್ದ) ಆಕೆಯ ಉದ್ದವಾದ ಕೂದಲರಾಶಿಯನ್ನು ಸುತ್ತಿಕೊಂಡು ಉಸಿರುಗಟ್ಟಿಸಿಕೊಂಡು ಸಾಯುತ್ತಾನೆ. ಇದನ್ನು ಕಂಡಾಗ ಕಾಮಾಕ್ಷಿ ಬಾಹ್ಯವಾಗಿ ದುಃಖಿಸುತ್ತಾಳೆ. ಸರ್ಪದ ಸಾವಿಗೇಕೆ ದುಃಖ ಎಂದ ಪತಿಗೆ ಅದು ದೈವಾಂಶವುಳ್ಳ ಸರ್ಪವೆಂದೂ, ಅದನ್ನು ಪೂಜಿಸಿದ್ದರಿಂದಲೇ ತಾವು ಗಂಡ-ಹೆಂಡಿರು ಅನ್ಯೋನ್ಯವಾಗಿ ಬದುಕಲಾಯಿತೆಂದೂ, ತನ್ನ ಕೂಸಿಗೆ ತಂದೆಯ ಸಮಾನನಾಗಿದ್ದ ಆ ಸರ್ಪಕ್ಕೆ ತನ್ನ ಮಗನೇ ಸಂಸ್ಕಾರ ಮಾಡಲೆಂದೂ ಹೇಳಿ ಒಪ್ಪಿಸಿ ಶವಸಂಸ್ಕಾರ ಮಾಡಿಸಿ ಸರ್ಪಕ್ಕೆ

ತನ್ನ ಋಣ ತೀರಿಸಿದೆನೆಂದು ನೆಮ್ಮದಿಯಿಂದ ಬದುಕುತ್ತಾಳೆ.

ಜನಪದ ಕತೆಗಳಲ್ಲಿ ಮುಖ್ಯ ಪಾತ್ರದ ತೊಡಕು ಬಿಡಿಸಲು ಬರುವ 'ಆಶಯ'ಗಳ ಹಾಗೆ ಇಲ್ಲಿ ಸರ್ಪ ಬರುತ್ತದೆ. ಗಂಡನಿಂದ ಸಿಗದ ಸುಖ - ಸಂತೋಷ ಕೊಡುತ್ತದೆ. ಮಗುವನ್ನು ಕೊಡುತ್ತದೆ. 'ದಿವ್ಯ'ದ ಸಮಯದಲ್ಲಿ ಆಕೆಯನ್ನು ನೆರವಾಗಿ ರಕ್ಷಿಸುತ್ತದೆ. ವೇಶ್ಯೆಯ ಸಹವಾಸದಿಂದ ತಪ್ಪಿಸಿ ಗಂಡನೊಂದಿಗೆ ಸುಖವಾಗಿ ಬಾಳಲು ನೆರವಾಗುತ್ತದೆ.

ಒಂದು ಹೆಣ್ಣು ವಿವಾಹದ ಚೌಕಟ್ಟನೊಳಗೆ ಬಯಸುವುದು ಗಂಡನೊಂದಿಗೆ ಸುಖಸಂಸಾರ, ಸಂತಾನ, ಸವತಿಯರ ಕಾಟವಿಲ್ಲದ ಸ್ಥಿತಿ, 'ಉತ್ತಮ ಗೃಹಿಣಿ' ಎಂದು ಸಮಾಜದಿಂದ ಸಿಗುವ ಗೌರವದ ಸ್ಥಾನ. ಇದೆಲ್ಲವನ್ನೂ ಕಾಮಾಕ್ಷಿ ಪಡೆದಳು ಸರ್ಪರಾಜನ ನೆರವಿನಿಂದ. ನಿಜವಾದ ತಂದೆಯಾಗಿದ್ದ ಸರ್ಪರಾಜನಿಗೆ ಮಗನಿಂದಲೇ ಸಂಸ್ಕಾರ ಮಾಡಿಸಿದಳು.

ಶಿಷ್ಟ ಸಮಾಜ ಇದನ್ನೇ ಬಯಸುತ್ತದೆ. ಅದು ಹೇಗೆ ಪಡೆದದ್ದು ಎಂಬುದಕ್ಕಿಂತ ಮುಖ್ಯ ಹೀಗಿರಬೇಕು ಎಂಬುದೇ ಪ್ರಧಾನ. ಇಂಥಲ್ಲಿ ಶಿಷ್ಟ ಸಮಾಜದ ಶೀಲದ ಬಗೆಗಿನ ಕಟ್ಟುಕಟ್ಟಳೆಗಳನ್ನು ಮುರಿದಳು ಆಕೆ. ಪತಿನಿಷ್ಠೆ ಇಲ್ಲದಾಗಲೂ 'ಪತಿವ್ರತೆ' ಯೆಂದು ಗೌರವಿಸಲ್ಪಡುತ್ತಾಳೆ. ತಾನು ಬಯಸುವುದನ್ನೆಲ್ಲಾ ಒಂದೊಂದಾಗಿ ಪಡೆದುಕೊಳ್ಳುತ್ತ ಹೋಗುವ ಕಾಮಾಕ್ಷಿಯ ಗೆಲವು ಓದುಗ-ನೋಡುಗರಲ್ಲೂ ಸಮಾಧಾನ ಹುಟ್ಟಿಸುತ್ತದೆ. ಏಕೆ ? ಅಹಲ್ಯೆಯ ಕಥೆಯಲ್ಲಿ ಸುಖಾಪೇಕ್ಷೆಗೆ ಶಿಕ್ಷೆ ಇದೆ. ಒಂದು ಬಗೆಯ ನೈತಿಕ ಪ್ರಜ್ಞೆಯನ್ನು ಹೇರುವ ಶಿಷ್ಟ ಸಂಪ್ರದಾಯದ ego ಅದು. ಅದನ್ನು ಮುರಿದೂ ಎಲ್ಲವನ್ನೂ ಪಡೆದುಕೊಳ್ಳುವ ಕ್ರಿಯೆಯ ಹಿಂದೆ ಭಂಜನೆ, ಪ್ರತಿಭಟನೆ ಒಂದು ವಿಚಿತ್ರ ವ್ಯಂಗ್ಯ ಇದೆ.

ಶಿಷ್ಟ ಸಂಪ್ರದಾಯದಲಿಯೂ ಇಂಥದೊಂದು ಗುಣ ಕಂಡುಬರುತ್ತದೆ. ಆದರೆ ಇಲ್ಲಿ ತೀರ್ಮಾನಿಸುವುದು ಆಕೆಯಲ್ಲ. ನಿಯಮಗಳ ಉಲ್ಲಂಘನೆ ತಿಳಿದೋ-ತಿಳಿಯದಯೋ ಹೇಗೇ ಆಗಿರಲಿ 'ಆಕೆ' ಶಿಕ್ಷಿಸಲ್ಪಡುತ್ತಾಳೆ. ತಪ್ಪುಗಾರನನ್ನು ಆಕ್ಷೇಪಿಸದೆ ಕೊಂಡಾಡಲಾಗುತ್ತದೆ.

ಬಹು ಚಾಣಾಕ್ಷ, ಸರ್ವಜನ ಹಿತ ಕಾಯುವ ಮಹಾಮಹಿಮ, ಯೋಗಿಗಳಿಗೆ ಯೋಗಿ, ಅವತಾರ ಪುರುಷ ಮಹಾವಿಷ್ಣು ಏನು ಮಾಡಿದನೆಂದು ನೆನಪಿಸಿಕೊಳ್ಳಿ. ಲಕ್ಷಣವಾಗಿ ಸಂಸಾರ ಮಾಡಿಕೊಂಡು ಪತಿಯೇ ಸರ್ವಸ್ವ ಎಂದು ಬದುಕು ಸಾಗಿಸುತ್ತಿದ್ದ ನಿರ್ಮಲವಾದ ತರುಣಿ ಬೃಂದೆಯನ್ನು ಆಕೆಯ ಪತಿಯ ವೇಷ ತೊಟ್ಟು ಬಂದ, ಕೆಡಿಸಿದ !

ಬೃಂದೆಯ ಪತಿ ಜಲಂಧರ. ಅವನು ಒಳ್ಳೆಯವನಲ್ಲ, ಸ್ತ್ರೀಲೋಲ. ಮಹಾಮಾತೆ ಪಾರ್ವತಿಯನ್ನೇ ವರಿಸಲು ಹೋಗಿದ್ದ. ಅಂಥ ದುಷ್ಟ ಬದುಕಿರಬಹುದೆ ? ಅವನನ್ನು ಕೊಲ್ಲಬೇಕು. ಆದರೆ ಆತ ಸಾಯುವುದಿಲ್ಲವಂತೆ. ಏಕೆಂದರೆ ಅವನ ಹೆಂಡತಿ ಬೃಂದೆ ಮಹಾಪತಿವ್ರತೆ ! ಆಕೆಯ ಪಾತಿವ್ರತ್ಯಕ್ಕೆ ಭಂಗ ತರಲೇಬೇಕು. ಹೀಗಾಗಿ ಲೀಲಾ ವಿನೋದ ವಿಹಾರಿ ವಿಷ್ಣು ಇದಕ್ಕೆ ಮುಂದಾದ. ಜಲಂಧರನ ವೇಷದಲ್ಲೇ ಬಂದು ಬೃಂದೆಯ ಸಂಗಮಾಡಿ ವ್ರತಭಂಗ ಮಾಡಿದ. ಅನಂತರ ಜಲಂಧರನನ್ನು ಸಂಹರಿಸಲಾಯಿತು.

ಶಿಷ್ಟರು ಇಂಥ ಘಟನೆಗಳಿಗೆ ಜಾಣ ತಿರುವು-ಅರ್ಥ ಕೊಟ್ಟುಕೊಳ್ಳುತ್ತಾರೆ. ಅವಳ ಪಾಡಿಗೆ ಅವಳಾಗಿದ್ದ ಬೃಂದೆಯನ್ನೇಕೆ ಹೀಗೆ ಕಾಡಿದ ವಿಷ್ಣು ? ಬೇರಾದ ಉಪಾಯವೂ ಇರಲಿಲ್ಲವೇ ಆತನಿಗೆ ? ಬೃಂದೆಯೇನೋ ವಿಷಯ ತಿಳಿದಮೇಲೆ ವಿಷ್ಣುವಿಗೆ ಶಾಪಕೊಟ್ಟು ಬೆಂಕಿಗೆ ಹಾರಿದಳು. ವಿಷ್ಣುವೂ ಸಹ ಆಕೆಯ ಬಗ್ಗೆ ಅಪರಿಮಿತ ಗೌರವ ಇದೆಯಾದ್ದರಿಂದ ಬೃಂದೆಗೆ 'ತುಳಸಿಯಾಗಿ ಯುಗಯುಗಗಳಲ್ಲಿ ಪೂಜಿತಳಾಗು' ಎಂದು ವರಕೊಟ್ಟ. ಪೂಜೆ ನಡೆಯುತ್ತಲೇ ಇದೆ !

ನೆಮ್ಮದಿಯಿಂದಿದ್ದ ಯಾರೋ ಹೆಂಗಸನ್ನು ಕೆಡಿಸಿ 'ಅಯ್ಯೋ ಪಾಪ ಹೀಗಾಯಿತು, ನಿನ್ನನ್ನು ಜನ ಪೂಜೆ ಮಾಡಲಿ, ಅಂಥ ಗೌರವ ಕೊಡಿಸುತ್ತೇನೆ' ಎನ್ನುವ 'ಜಗದ್ರಕ್ಷಕ' ವಿಷ್ಣುವಿನ ಈ ಕೃತ್ಯವನ್ನು ಹೇಗೆ ಒಪ್ಪಬೇಕು ? ಬೃಂದೆ ಪತಿವ್ರತೆಯಾಗಿದ್ದುದೇ ತಪ್ಪೆ ? ಅವಳ ಗಂಡ ಕೇಡಿಗ - ಲಂಪಟ ಆದರೆ ಆಕೆ ಹೊಣೆಯೆ ? ಅವಳಿಗೇ ಶಿಕ್ಷೆ ಆಗಬೇಕೆ ? ಶಿಷ್ಟ ಸಮಾಜ ಸುಂದರವಾದ ತಿರುವು-ಅರ್ಥ ಕೊಟ್ಟು ಓರೆಕೋರೆಗಳನ್ನು ಮುಚ್ಚಿಕೊಳ್ಳುತ್ತದೆ. ಏನೇ ಕಾರಣ ಕೊಟ್ಟರೂ ನಿರ್ದೋಶಿ ಬೃಂದೆಗೆ ಅನ್ಯಾಯವಾದ್ದಂತೂ ನಿಜತಾನೆ? ಆದೂ ವಿಷ್ಣುವಿನಂಥ ಜಗತ್ಪೂಜ್ಯನಿಂದ ಆಯಿತು. ಆದ್ದರಿಂದಲೇ ವಿಷ್ಣುವಿಗೆ ಜಲಂಧರನನ್ನು ಸಂಹರಿಸಿದ ಹೆಗ್ಗಳಿಕೆ ಬಂತು.

ಈ ಎರಡೂ ಕತೆಗಳಲ್ಲಿ ಒಂದು ಸಾಮಾನ್ಯ ಅಂಶವಿದೆ. ಪ್ರಾರಂಭದಲ್ಲೇ ಅಹಲ್ಯೆಯ ಪ್ರಸಂಗದಲ್ಲಿ ಹೇಳಿದಹಾಗೆ ಕಾಮಾಕ್ಷಿ ಬೃಂದೆಯರನ್ನು ಕೂಡಿದವರು ಅವರವರ 'ಪತಿ'ಯ ವೇಷದಲ್ಲೇ ಬಂದಿದ್ದರು. ಜಲಂಧರನನ್ನು ಕೊಲ್ಲಲು ಬೃಂದೆಯ

ಪಾತಿವ್ರತ್ಯಕ್ಕೆ ಭಂಗ ಆಗಬೇಕೆಂಬ ಮಾತು ಹೇಗೆ ಸಾಧ್ಯವಾಗುತ್ತದೆ? ಆಕೆ ಕೂಡಿದ್ದು ತನ್ನ 'ಪತಿ'ಯನ್ನೇ ತಾನೇ ? ಅಲ್ಲಿ ನಂಬಿಕೆಯೇ ಮುಖ್ಯವಲ್ಲವೆ ಎಂದು ಪ್ರಶ್ನಿಸಿದರೆ ಏನು ಉತ್ತರ ಸಿಗುತ್ತದೆ ?

ಕಾಮಾಕ್ಷಿಯ ಪ್ರಸಂಗದಲ್ಲೂ ಬೆಳಗಿನ ಕೆಲಸಗಳ ಒತ್ತಡ, ಒಟ್ಟು ಕುಟುಂಬದ ಹಿನ್ನೆಲೆಯಲ್ಲಿ ಹಗಲು ಹೊತ್ತಿನಲ್ಲಿ ಸಾಧ್ಯವಾಗದ ನಿಕಟತೆ ರಾತ್ರಿಯಲ್ಲಿ ಮಾತ್ರ ಸಾಧ್ಯವಾಗುವ ರೀತಿ, ಬಂದವನು ತನ್ನ ಪುರುಷನೆ ಎಂದು ಆಕೆಯೂ ನಂಬಿದಳೂ. ಕಾಮಾಕ್ಷಿ-ಬೃಂದೆಯರಂಥ ಹೆಣ್ಣುಮಕ್ಕಳಲ್ಲಿ ಉಂಟಾಗಬಹುದಾದ ಅಪರಾಧಿ ಪ್ರಜ್ಞೆಯನ್ನು ಹೋಗಲಾಡಿಸುವ ತಂತ್ರವಾಗಿಯೂ ಈ ಪತಿಯ ವೇಷದಲ್ಲಿ ಆಕ್ರಮಿಸುವ ವಿಧಾನ ವಿಶೇಷವೆನ್ನಿಸುತ್ತದೆ.

ಇಂಥಲ್ಲಿ ಕೇವಲ ಕತೆ, ಭಕ್ತ ಎಂಬ ಮಿತಿಗಳನ್ನು ಹಾಕಿಕೊಳ್ಳದೆ ವಸ್ತುನಿಷ್ಠವಾಗಿ ಸಾಧ್ಯಾಸಾಧ್ಯತೆಗಳನ್ನು ಮತ್ತು ಒಂದರ ವಿರುದ್ಧ ಮತ್ತೊಂದು ಒಳಗೇ ತಣ್ಣಗೆ ಕೊರೆಯುತ್ತಲೇ ಪ್ರತಿಭಟಿಸುವ ರೀತಿಯನ್ನು ಗುರುತಿಸುವ ಅಗತ್ಯವಿದೆ ಅಲ್ಲವೆ ?

ತಾಳು ಗೆಳೆಯಾ

ತುಸು ತಾಳು ಗೆಳೆಯಾ
ಒಮ್ಮೆಯೂ ತಿರುಗಿ ನೋಡದೆ ಹೋಗುತಿರುವೆ
ನೀ ತೋರಿದ ದಾರಿಯಲಿ ನಡೆದು ನಡೆದು
ಕಾಲುಗಳಿಗೆ ಜುಮ್ಮು ಹಿಡಿದಿದೆ
ನಿನ್ನೊಂದಿಗೆ ಹೆಜ್ಜೆ ಹಾಕುವೆನೆಂದಾಗ
ನೀ ಹೀಗೆ ಅವಸರಿಸಬೇಡ
ನಾನಾಗಿ ನಡೆಯಲು ಸಿದ್ಧಳಾಗುತಿರುವೆ
ಬೆಳಕಿಗೆ ಕಣ್ಣ ಹೊಂದಿಸಲು ಹೆಣಗುತ್ತಿರುವೆ

ಅಡಿಯ ಮುಂದಿಡುವಾಗ ಹಳೆಯ ನೆನಪು
ಸವೆದ ದಾರಿಯ ಬಿಟ್ಟ ಅಳುಕು
ಹೆಜ್ಜೆ ಮೂಡಿಸುವ ತವಕ
ನೀ ಹಂಗಿಸಬೇಡ ಗೆಳೆಯಾ
ಹೂತ ಕಾಲುಗಳ ಬಿಡಿಸಿಕೊಂಡು
ನೆಲದ ಕಸುವ ಹೀರಿ
ಹೆಜ್ಜೆ ಕಿತ್ತಿಡುವ ಯತ್ನಕ್ಕೆ
ನೀ ಮಣ್ಣೆರೆಚ ಬೇಡ

ಮಗುಳ್ನಕ್ಕು ತುಸು ಕಾಯ್ದಿಯಾದರೆ
ನಾ ನಿನ್ನ ಜೊತೆಯಾಗುವೆ
ಬಿಸಿಲು ಮಳೆ ಚಳಿಗಾಳಿ ಯಾವ ಲೆಕ್ಕ
ನಡೆವಾಗ ಕೈಹಿಡಿದು ಅಕ್ಕಪಕ್ಕ
ಹಿನ್ನಡೆವ ಅಳುಕಿಲ್ಲ ಮುನ್ನಡೆವ ಹಮ್ಮಿಲ್ಲ
ಒಂದೆ ನೆಲೆ ಒಂದೆ ಗುರಿ
ನೆಮ್ಮದಿಯ ಸುಖತಾಣ

ಡಾ. ಚಂದ್ರಮತಿ ಸೋಂದಾ

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 100 ರೂ

ಸಂಸ್ಥೆಗಳಿಗೆ : 150 ರೂ

ಸಂ.ಮಂಡಳಿ

REGD No. : CPMG/KA/BGE/289/2003 - 05

BOOK-POST
PRINTED MATTER

ವಿಳಾಸ :

ಮಾನಸ

ಪಂಚಾಯಿತಿ ರಸ್ತೆ, ಕಾಡುಗೋಡಿ

ಬೆಂಗಳೂರು - 560 067